ಮಾನಸಿ

ತಿಂಗಳ ಪತ್ರಿಕೆ ಜೂನ್ ೧೯೯೧

ಸ್ವಾತಂತ್ರ್ಯ ಹೋರಾಟದಲ್ಲಿ
ಕರ್ನಾಟಕದ ಮಹಿಳೆಯರ ಪಾತ್ರ.



ಬಾಂಬೆಯ ಮಹಿಳಾ ಶೋಷ
ಣೆಯ ವಿರುದ್ಧದ ವೇದಿಕೆ.

ಸಂಸ್ಕಾರ.

ಹೆಣ್ಣಿಗೇಕೆ ವಿಧವೆ ಪಟ್ಟ?

ಮಾನಸ

ಸಂಪುಟ: ೪ ಸಂಚಿಕೆ:೫
ಜೂನ್ ೧೯೯೧

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ)
ಬೆಂಗಳೂರು—**560067**

ಬಿಡಿಪ್ರತಿ:**2** ರೂ.
ಸೂಚನೆ: ವಾರ್ಷಿಕ ಚಂದಾ:**20**ರೂ.
ಆಜೀವ ಚಂದಾ: **250**ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ..........



ಸಂಪಾದಕೀಯ

೧೯೮೧ ರ ಜನಗಣತಿಯ ಅಂಕಿ-ಅಂಶಗಳು ಈಗಾಗಲೇ ಪ್ರಕಟವಾಗಿ ಸಾಕಷ್ಟು ಪ್ರತಿಕ್ರಿಯೆಗಳೂ ಬಂದದ್ದಾಯ್ತು. ಸ್ತ್ರೀಯರ ಸಂಖ್ಯೆ ಪುರುಷರ ಸಂಖ್ಯೆಗೆ ಅನುಗುಣವಾಗಿಲ್ಲ ಎಂಬುದೇ ಅಲ್ಲದೆ ಸಂಖ್ಯಾ ಪ್ರಮಾಣ ವರ್ಷ-ವರ್ಷವೂ ಕಡಿಮೆಯಾಗುತ್ತಿದೆ ಎಂಬುದೇ ಚಿಂತೆಗೆ ಕಾರಣವಾಗಿದೆ. ಇದಕ್ಕೆ ಪೂರಕವಾಗಿ ಪತ್ರಿಕೆಗಳಲ್ಲಿ ಇನ್ನಿತರ ಮಾಧ್ಯಮಗಳಲ್ಲಿ ಭಾರತದಂತಹ ಅಭಿವೃದ್ಧಿ ಶೀಲ ದೇಶಗಳಲ್ಲಿ ಅಪೌಷ್ಠಿಕತೆಯಿಂದ ಹೆಂಗಸರು, ಬಾಲಕಿಯರು ನರಳಿ ಸಾವನ್ನಪ್ಪುವುದನ್ನೂ ಪ್ರಸಾರ ಮಾಡುತ್ತಿವೆ. ಹಾಗೇ ತಾಯಂದಿರಾಗುವ ಸಮಯದಲ್ಲಿ ಮರಣ ಮುಖರಾಗುವ ಸ್ತ್ರೀಯರ ಸಂಖ್ಯೆಯನ್ನು ಕಡಿಮೆಗೊಳಿಸಲಾಗುತ್ತಿಲ್ಲವೆಂಬುದೂ ಅಷ್ಟೇ ಸತ್ಯದ ಸಂಗತಿಯಾಗಿದೆ.

ನಮ್ಮದು ಬಡ ದೇಶವಾದರೂ ನಾಯಕರುಗಳ ಶತಮಾನೋತ್ಸವ ಪುಣ್ಯತಿಥಿಗಳಿಗೆ, ಅರ್ಥವಿಲ್ಲದ ಇನ್ನಿತರ ಸಮಾರಂಭಗಳಿಗೆ ಹಣವನ್ನು ನೀರಿನಂತೆ ವ್ಯಯಿಸಲಾಗುತ್ತದೆ. ಒಬ್ಬ ತಾಯಿಗೆ ಕೇವಲ ೩೦ ರೂ ಅಷ್ಟನ್ನು ವ್ಯಯಿಸಿದರೆ ಶೇ. ೬೦ ರಷ್ಟು ತಾಯಂದಿರನ್ನು ಉಳಿಸಿಕೊಳ್ಳಬಹುದೆಂದು ಅಮೆರಿಕದ ತಂಡವೊಂದು ಅಭಿಪ್ರಾಯಪಟ್ಟಿದೆ. ಮೇಲಿನ ಎರಡು ಸಂಗತಿಗಳೂ ವಿಪರ್ಯಾಸವೆನಿಸುತ್ತದೆ ಅಲ್ಲವೆ? ದೇಶದಲ್ಲಿ ಯಾವುದೇ ಪ್ರಗತಿಪರ ಹೆಜ್ಜೆಯನ್ನು ತೆಗೆದುಕೊಳ್ಳಬೇಕಿದ್ದರೂ ಹಣಕ್ಕಾಗಿ ಹೊರದೇಶಗಳತ್ತ ದೃಷ್ಟಿ ಹಾಯಿಸುವ ಮಂದಿ, ಅನಗತ್ಯ ಆಡಂಬರಗಳನ್ನು ಪ್ರದರ್ಶನಗಳನ್ನು ಬಹಿಷ್ಕರಿಸಿದ್ದರೂ ಸಾಕಿತ್ತು.

ಹೊರದೇಶಗಳಿಂದ, ವಿಶ್ವಸಂಸ್ಥೆ ಆರೋಗ್ಯ ರಕ್ಷಣೆಗೆಂದು ವಿಶೇಷವಾಗಿ ಮಕ್ಕಳು-ತಾಯಂದಿರ ಆರೋಗ್ಯ ಕಾಪಾಡಲು ಬಂದಂತಹ ಹಣ ಎಲ್ಲಿ ಸೋರಿ ಹೋಯಿತು? ಏಕೆಂದರೆ ಮಾತೆಯರ ಸಾವಿನ ಸಂಖ್ಯೆ ಸ್ವಲ್ಪ ಕುಂಠಿತಗೊಂಡಿದ್ದಿದ್ದರೆ, ಜನಕ್ಕೆ ಸ್ವಲ್ಪವಾದರೂ ನಂಬಿಕೆ ಬರುತ್ತಿತ್ತು. ಅಂದರೆ ಇತರೆಲ್ಲ ಪ್ರಗತಿಪರ ಕಾರ್ಯಕ್ರಮಗಳಂತೇ ಇಲ್ಲೂ ಆಗಿದೆ ಎಂದಂತಾಯ್ತು. ಹುಟ್ಟಿನಿಂದ ಕಡೇವರೆಗೂ ಪ್ರತಿ ಹೆಜ್ಜೆಯಲ್ಲೂ ಸ್ತ್ರೀ-ಪುರುಷ ನಡುವೆ ಪ್ರತಿಯೊಂದು ವಿಷಯದಲ್ಲೂ ತಾರತಮ್ಯ ಎದ್ದು ಕಾಣುತ್ತದೆ, ಆದ್ದರಿಂದ ಇಲ್ಲಿ ಕೇವಲ ಆಡಳಿತ ವ್ಯವಸ್ಥೆಯನ್ನಷ್ಟೇ ದೂರಿ ಪ್ರಯೋಜನವಿಲ್ಲ. ಸಾವಿನಲ್ಲೂ ಸಹ, ಚಿಕ್ಕ ವಯಸ್ಸಿನ ಸ್ತ್ರೀಯರು ಅವಸಾನವಾದರೆ, "ಅದೃಷ್ಟವಂತೆ" ಎಂದೋ "ಮುತ್ತೈದೆ ಸಾವು, ಪುಣ್ಯವಂತೆ...." ಎಂಬಂಥ ಉದ್ಗಾರಗಳೇ ಹೆಚ್ಚು. ಸರ್ಕಾರ ಇಲ್ಲವೇ ಸಮಾಜ ಅಥವ ಕುಟುಂಬ-ಇವುಗಳಲ್ಲಿ ಯಾವುದಾದರೂ ಒಂದಕ್ಕಾದರೂ ಸ್ತ್ರೀಯರ ಬಗ್ಗೆಗಿನ ಕಾಳಜಿ ಪ್ರಾಮಾಣಿಕವಾಗಿದ್ದರೂ ಸಾಕು, ಮಹಿಳೆಯರ "ಜೀವ ಭಾರ" ದಿಂದ ಸಾವಿನೊಡನೆ ಸೆಣಸುವಂಥ ಪರಿಸ್ಥಿತಿ ಬರುವುದಿಲ್ಲ.

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ.

ಡಾ|| ಎಚ್. ಎಸ್. ಉಷಾರಾಣಿ.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರ ಅನುಭವದ ದಾಖಲೆಯಾಗಿರುವುದು ತೀರಾ ಅಪರೂಪ. ಕಾಲದ ಕತ್ತಲಲ್ಲಿ ಅವು ತೀರಾ ಸಹಜವೆಂಬಂತೆ ಹುದುಗಿಹೋಗುತ್ತವೆ. ಆದರೆ ಕರ್ನಾಟಕದ ಮಹಿಳೆಯರು ಸ್ವಾತಂತ್ರ ಚಳವಳಿಯಲ್ಲಿ ಕೆಚ್ಚೆದೆಯಿಂದ ಭಾಗವಹಿಸಿ, ಚಳುವಳಿಯ ಒಂದು ಭಾಗವಾಗಿದ್ದುದು ಕೇವಲ ಕುತೂಹಲಕರ ಸಂಗತಿ ಮಾತ್ರವಲ್ಲ ಜೊತೆಗೆ ಅಚ್ಚರಿಯನ್ನುಂಟು ಮಾಡುವಂತಹದು. "ಮನೆ" ಎಂಬ ಚೌಕಟ್ಟನ್ನು ಮೀರಿ ಹೋರಾಟದಲ್ಲಿ ಪಾಲ್ಗೊಂಡ ಈ ಮಹಿಳೆಯರ ಜೀವನ ಇಂದಿಗೂ ಸ್ಫೂರ್ತಿದಾಯಕ.

ಬ್ರಿಟೀಷರ ಆಳ್ವಿಕೆ ಮತ್ತು ೧೮ ನೇ ಶತಮಾನದಲ್ಲಿ ನಡೆದ ಅನೇಕ ಯುದ್ಧಗಳು ರಾಜಕೀಯದಲ್ಲಿ ಏರು ಪೇರುಗಳನ್ನುಂಟು ಮಾಡಿದಂತೆ, ಗ್ರಾಮೀಣ ಪ್ರದೇಶಗಳಲ್ಲಿಯೂ ಸಾಮಾಜಿಕ ಭದ್ರತೆಯನ್ನು ದುರ್ಬಲಗೊಳಿಸಿದವು. ಬ್ರಿಟಿಷರು ಪ್ರಾಚೀನ ಸಂಸ್ಕೃತಿಯನ್ನು ಉಳಿಸಿಕೊಂಡಿರುವ ಭಾರತೀಯರನ್ನು ಅಜ್ಞಾನಿಗಳು, ಮೂಢರು ಎಂದು ಕೀಳಾಗಿ ಕಾಣತೊಡಗಿದರು. ಕೆಲವು ಮಂದಿಯನ್ನುಳಿದು ಹೆಚ್ಚಿನ ಬ್ರಿಟಿಷ್ ಸೈನಿಕ ಅಧಿಕಾರಿಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿರತೆಯನ್ನು ಪಲ್ಲಟಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಜೊತೆಗೆ ಕ್ರೈಸ್ತ ಮಿಷನರಿಗಳು ಮತಾಂತರಗೊಳಿಸಲು ಅವಿರತವಾಗಿ ಶ್ರಮಿಸುತ್ತಿದ್ದವು. ಇದರಿಂದ ಪ್ರತಿಕ್ರಿಯೆಗಳು ಅನಿವಾರ್ಯವಾದವು. ೧೮೫೭–೫೮ ರಲ್ಲಿ ನಡೆದ ಸಿಪಾಯಿ ದಂಗೆ ರಾಜಕೀಯ ಪ್ರತಿಕ್ರಿಯೆಯಾದರೆ, ಪ್ರಾರ್ಥನಾ ಸಮಾಜ ಮತ್ತು ಆರ್ಯ ಸಮಾಜಗಳ ಸ್ಥಾಪನೆ ಸಾಮಾಜಿಕ ಮತ್ತು ಧಾರ್ಮಿಕ ಪ್ರತಿಕ್ರಿಯೆಗಳಾಗಿ ಹೊರ ಹೊಮ್ಮಿದವು. ಈ ಅವಧಿಯಲ್ಲಿದ್ದ ಸುಧಾರಕರು ಸ್ತ್ರೀಯ ಅಶಕ್ತತೆಯ ಪ್ರಶ್ನೆಯನ್ನು ಹೋಗಲಾಡಿಸಿ ಸಮಾನತೆಯನ್ನು ತಂದು ಕೊಡಲು ಪ್ರಾಮುಖ್ಯತೆ ನೀಡಿದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ೧೮೮೫ರಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ ಉನ್ನತ ವರ್ಗದ ಸ್ತ್ರೀಯರ ಸ್ಥಿತಿ-ಗತಿಗಳು ಉತ್ತಮಗೊಂಡವು. ಮೊದಲಿಗೆ ಕಾಂಗ್ರೆಸ್ ನಾಯಕರು ಸ್ತ್ರೀಯರ ಸಮಸ್ಯೆಗಳನ್ನು ತೆಗೆದುಕೊಳ್ಳುವುದು ಸಮಂಜಸವಲ್ಲ ಎಂದೇ ಭಾವಿಸಿದ್ದರು. ದಾದಾಭಾಯಿ ನವರೋಜಿ ಅವರು "ರಾಷ್ಟ್ರೀಯ ಕಾಂಗ್ರೆಸ್ ಇಡೀ ರಾಷ್ಟ್ರವನ್ನು ಪ್ರತಿನಿಧಿಸುವ ಸಮಸ್ಯೆಗಳಿಗೆ ಸೀಮಿತವಾಗಿರಬೇಕು. ಸಾಮಾಜಿಕ ಸುಧಾರಣೆ ಹಾಗೂ ಇತರ ವರ್ಗದ ಪ್ರಶ್ನೆಗಳನ್ನು ವರ್ಗಗಳ ಕಾಂಗ್ರೆಸ್‌ಗಳಿಗೆ ಬಿಡಬೇಕು" ಎಂದು ಹೇಳಿದ್ದರು. ಪರಿಣಾಮವಾಗಿ ೧೮೮೭ ರಲ್ಲಿ ದಖನ್‌ನಲ್ಲಿ "ಸೋಷಿಯಲ್ ಕಾನ್‌ಫರೆನ್ಸ್" ಅಸ್ತಿತ್ವಕ್ಕೆ ಬಂದಿತು. ಇದನ್ನು ಸ್ಥಾಪಿಸಿದವರು ಮಹದೇವ ಗೋವಿಂದ ರಾನಡೆ. "ಸಾಮಾಜಿಕ ವ್ಯವಸ್ಥೆ ನ್ಯಾಯಬದ್ಧವಾಗಿರದ ಹೊರತು ರಾಜಕೀಯ ಹಕ್ಕು ಬಾಧ್ಯತೆಗಳನ್ನು ಚಲಾಯಿಸಲು ಯೋಗ್ಯರಲ್ಲ" ಎಂಬುದು ಅವರ ನಂಬಿಕೆಯಾಗಿತ್ತು. ಎ. ಓ ಹ್ಯೂಮ್‌ರವರು ತಮ್ಮ ಸಹೋದ್ಯೋಗಿಗಳಿಗೆ ಈ ರೀತಿಯಾಗಿ ಎಚ್ಚರಿಸಿದರು. "ವಿಭಿನ್ನ ರಾಜಕೀಯ ಸುಧಾರಕರು ಸ್ತ್ರೀಯರ ಸ್ಥಿತಿಯನ್ನು ಉತ್ತಮಗೊಳಿ

ಸದ ಹೊರತು ರಾಜಕೀಯ ಹೋರಾಟ ನಿರ್ಥಕ ವಾದುದು" ಎಂದು, ೧೮೯೫ ರಲ್ಲಿ ಸುರೇಂದ್ರನಾಥ್ ಬ್ಯಾನರ್ಜಿ ಅವರು "ನಮ್ಮ ಸ್ತ್ರೀಯರನ್ನು ನಾವು ಎಷ್ಟೇ ಗೌರವಿಸಿ, ಪ್ರೀತಿಸಿದರೂ ಅವರು ಪ್ರಾತಿನಿಧಿಕ ಸರ್ಕಾರಕ್ಕೆ ಇನ್ನೂ ಅರ್ಹರಾಗಿಲ್ಲ ಎಂದೇ ಆಲೋಚಿಸುತ್ತೇವೆ" ಎಂದು ನುಡಿದಿದ್ದರು, ಸ್ತ್ರೀಯರು ರಾಜಕೀಯ ಪ್ರವೇಶಿಸಿದುದನ್ನು ಕುರಿತು ನೀರಾ ದೇಸಾಯಿಯವರ ಅಭಿಪ್ರಾಯ ಹೀಗಿದೆ: "ಸ್ವದೇಶಿ ಒಳಕೆಯ ಕಾರ್ಯಕ್ರಮವು ಸ್ತ್ರೀಯರನ್ನು ರಾಜಕೀಯ ಚಳುವಳಿಗೆಳೆಯಿತು. ಅದರಂತೆ ವಿದೇಶಿ ಬಟ್ಟೆಗಳ ಬಳಕೆಗೆ ಬದಲಾಗಿ ಸ್ವದೇಶಿ ಬಟ್ಟೆ ಧರಿಸಬೇಕಾಯಿತು. ಈ ಅವಧಿಯಲ್ಲಿ ಬ್ರಿಟಿಷ್ ಅಧಿಕಾರಿಯೊಬ್ಬನನ್ನು ಕೊಂದ ದಕ್ಕಾಗಿ ಗಲ್ಲಿಗೇರಿಸಲ್ಪಟ್ಟಿದ್ದ ಕ್ರಾಂತಿಕಾರಿ ಯುವಕ ಕುದೀರಾಮ್ ಬೋಸ್‌ನ ತಾಯಿಯನ್ನು ೫೦೦ ಮಂದಿ ಕಲ್ಕತ್ತಾದ ಮಹಿಳೆಯರು ಅಭಿನಂದಿಸಿದ್ದರು. ಗಾಂಧೀಜಿ ರಾಷ್ಟ್ರೀಯ ಚಳುವಳಿಯಲ್ಲಿ ಕಾಣಿಸಿಕೊಳ್ಳುವ ಮುನ್ನ ಸ್ತ್ರೀಯರ ಮೇಲೆ ಪ್ರಭಾವ ಬೀರಿದ ಪ್ರತಿಭಾವಂತ ಮಹಿಳೆಯರೆಂದರೆ ವಿದೇಶಿಯರಾದ ಅನಿಬೆಸೆಂಟ್ ಮತ್ತು ನಮ್ಮವರೇ ಆದ ಸರೋಜಿನಿ ನಾಯ್ಡು. ೧೯೧೭ ರ ಹೋಮ್ ರೂಲ್ ಚಳುವಳಿಗೆ ಹತ್ತು ಪಟ್ಟು ಬಲ ಬಂದದ್ದು ಮಹಿಳೆಯರ ಸಾಹಸ, ಶೌರ್ಯ, ಸಹನೆ, ಸ್ವಾರ್ಥ ತ್ಯಾಗ ದಿಂದಾಗಿ ಎಂದು ಅನಿಬೆಸೆಂಟ್ ಅವರ ಹೇಳಿಕೆಯನ್ನು ಉದ್ಧರಿಂದ್ದಾರೆ"

ಗಾಂಧೀಜಿ ಮೊದಲ ಮಹಾಯುದ್ಧದ ಒಳಿಕ ರಾಜಕೀಯರಂಗ ಪ್ರವೇಶಿಸಿ ಸಹಸ್ರಾರು ಮಂದಿಯ ಹೃದಯ ಗೆಲ್ಲುವುದರಲ್ಲಿ ಯಶಸ್ವಿಯಾಗಿ, ಜನಪ್ರಿಯ ನಾಯಕರಾಗಿ ಉದಯಿಸಿದರು. ಈ ಶತಮಾನದ ೨೦,೩೦ ನೇಯ ದಶಕದಲ್ಲಿ ಮಹಿಳೆಯರನ್ನು ಜಾಗೃತಗೊಳಿಸುವುದರಲ್ಲಿ ಗಾಂಧೀಜಿಯ ಪಾತ್ರ ಮಹತ್ವಪೂರ್ಣವಾದುದು. ಅವರ ಪ್ರೋತ್ಸಾಹದಿಂದಾಗಿ ಸಾಮ್ರಾಜ್ಯ ಶಾಹಿಗಳ ವಿರುದ್ಧ ನಡೆಸಿದ ಹೋರಾಟದಲ್ಲಿ ಪುರುಷರಷ್ಟೇ ಮಹಿಳೆಯರು ಮಹತ್ವದ ಪಾತ್ರ ವಹಿಸವಂತಾಯಿತು. ೧೯೨೦-೨೨ ರಲ್ಲಿ ಗಾಂಧೀಜಿ ಅಸಹಕಾರ ಚಳುವಳಿಗೆ ಕರೆ ಇತ್ತಾಗ ಯುವಕರು, ವೃದ್ಧರು, ಹೆಂಗಸರು, ಗಂಡಸರು ಪೊಲೀಸರ ಲಾಟಿ ಏಟಿಗೆ ಬೆದರದೆ ಮೆರವಣಿಗೆಯಲ್ಲಿ ಭಾಗವಹಿಸಿದರು. ಈ ಸಂಧರ್ಭದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರು ನಡೆಸಿದ ಹೋರಾಟ ಸ್ಮರಿಸುವಂತದ್ದು. ಅವರು ಚಳುವಳಿಯ ನೇತಾರರು ಆಗಿದ್ದರು,

ಉತ್ತರ ಕರ್ನಾಟಕದ ಮಹಿಳೆಯರಲ್ಲಿ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡಿ ಅವರ ಅಭ್ಯುದಯಕ್ಕಾಗಿ ಶ್ರಮಿಸಿದವರು ಉಮಾಬಾಯಿ ಕುಂದಾಪುರ, ಇವರಷ್ಟೇ ಉತ್ಸಾಹಿಗಳಾಗಿದ್ದವರು ಕೃಷ್ಣಾಬಾಯಿ ಪಣಜಿಕರ್. ಅವರು ೩೦ ರ ದಶಕದಲ್ಲಿ ನಡೆದ ಸತ್ಯಾಗ್ರಹ ಚಳುವಳಿಗೆ ಸ್ಫೂರ್ತಿ ನೀಡಿದ್ದರು. ಸ್ವಾತಂತ್ರ್ಯ ಹೋರಾಟ ಮತ್ತು ಸಮಗ್ರ ಕರ್ನಾಟಕದ ಉದಯಕ್ಕಾಗಿ ಹೋರಾಡಿದವರಲ್ಲಿ ಒಳ್ಳಾರಿ ಸಿದ್ದಮ್ಮ ಅಗ್ರಗಣ್ಯರು. ಯಶೋದರಮ್ಮ ದಾಸಪ್ಪ ಮತ್ತೊಬ್ಬರು, ಹರಿಜನೋದ್ಧಾರಕ್ಕಾಗಿ ಮಹಿಳೆಯರನ್ನು ಜಾಗೃತಗೊಳಿಸಿದವರು ನಾಗಮ್ಮ ಪಾಟೀಲ್. ಇನ್ನೂ ಅನೇಕ ನಾಯಕಿಯರು ತಮ್ಮ ಪ್ರತಿಭೆ ಮತ್ತು ಶಕ್ತಿಯನ್ನು ರಾಷ್ಟ್ರ ಸೇವೆಗಾಗಿ ವಿನಿಯೋಗಿಸಿದ್ದಾರೆ.

ಕರ್ನಾಟಕದಲ್ಲಿ ಸಮಾಜದ ಸಾಮಾನ್ಯ ವರ್ಗದ ಸ್ತ್ರೀಯರು ಅನಕ್ಷರಸ್ಥರಾಗಿದ್ದು ರಾಷ್ಟ್ರೀಯ ಹೋರಾಟದ ಬಗ್ಗೆ ಸ್ಪಷ್ಟ ಕಲ್ಪನೆ ಹೊಂದಿಲ್ಲದಿದ್ದರೂ ಗಾಂಧೀಜಿ ನೀಡಿದ ಕರೆಗೆ ಓಗೊಟ್ಟು ಎಲ್ಲಾ ರೀತಿಯ ನೋವು, ನರಳುವಿಕೆಯನ್ನು ಸಹಿಸಿಕೊಂಡಿದ್ದರು. ತಮ್ಮ ಪುರುಷರು ಬಂಧಿಸಲ್ಪಟ್ಟಾಗ ಆರತಿ ಬೆಳಗಿ ನಗು ನಗುತ್ತಲೇ ಬೀಳ್ಕೊಡುತ್ತಿದ್ದರು. ಕಾಂಗ್ರೆಸ್ ಕಾರ್ಯಕರ್ತರಿಗೆ ಆಹಾರವಿತ್ತು, ಆಶ್ರಯ ನೀಡಿದರು. ಕಾಂಗ್ರೆಸ್‌ನ ಶಿಬಿರದಿಂದ ಶಿಬಿರಕ್ಕೆ ರಹಸ್ಯ ಮಾಹಿತಿಗಳನ್ನು ಮತ್ತು ಆದೇಶಗಳನ್ನು ಒಯ್ಯುವ ದೂತೆರಂತೆಯೂ ವರ್ತಿಸುತ್ತಿದ್ದರು ಸತ್ಯಾಗ್ರಹಿಗಳಂತೆ ನಡೆದುಕೊಂಡರು. ೧೯೩೧ ರ ಏಪ್ರಿಲ್ ೬ ರಂದು ಕೈಗೊಂಡ ಉಪ್ಪಿನ ಸತ್ಯಾಗ್ರಹದಲ್ಲಿ ಸಾವಿರಾರು ಮಂದಿ ಮಹಿಳೆಯರು ವೀರ ಯೋಧರಂತೆ ಸಮುದ್ರದತ್ತ ದಾಪುಗಾಲು ಹಾಕಿದ್ದನ್ನು ಕಂಡ ಗಾಂಧೀಜಿ ಅದನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕೆಂದು ಹೇಳಿದ್ದರು,

ಬಾಂಬೆ ಪ್ರೆಸಿಡೆನ್ಸಿಯ ವ್ಯಾಪ್ತಿಗೊಳಪಟ್ಟಿದ್ದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಸಿದ್ದಾಪುರ, ಸಿರಸಿ ತಾಲೂಕಿನ ಮಹಿಳೆಯರ ಹೋರಾಟ ಸ್ಮರ

ಣೀಯ ಉದಾಹಣೆಗೆ: ಸಿದ್ಧಾಪುರ ತಾಲ್ಲೂಕಿನ ಅಕ್ಕುಂಜಿಯ ಪಟೇಲರ ವಿರುದ್ಧ ಗೌರಮ್ಮ, (ಹಿಂದೂಸ್ತಾನಿ ಸೇವಾದಳದ ಕಾರ್ಯಕರ್ತರಾದ ವೆಂಕಟರಾಮಯ್ಯನವರ ಪತ್ನಿ) ಕಾವೇರಮ್ಮ, ಭಾಗೀರಥಮ್ಮ ಮತ್ತು ದುಗ್ಗಮ್ಮ ಸತ್ಯಾಗ್ರಹ ನಡೆಸಿದರು ಈ ಸಂದರ್ಭದಲ್ಲಿ ಅವರು ಪೊಲೀಸರ ಲಾಟಿ ಏಟು ಒದೆತ, ಅವಾಚ್ಯ ಶಬ್ದಗಳ ನಿಂದನೆಯನ್ನು ಲೆಕ್ಕಿಸಲಿಲ್ಲ, ಹಾಗೆಯೇ ಸಿರಸಿ ತಾಲ್ಲೂಕಿನ ತಿಗಣಿಯ ಗಡಿಗೆಪ್ಪಗೌಡರ ವಿರುದ್ಧ ವೆಂಕಮ್ಮ ಮತ್ತು ಪರಮೇಶ್ವರಮ್ಮ ಉಪವಾಸ ಸತ್ಯಾಗ್ರಹ ಹೂಡಿದ್ದರು. ಅವರು ರಾತ್ರಿವೇಳೆ ಹತ್ತಿರದ ದೇವಸ್ಥಾನದಲ್ಲಿ ತಂಗುತ್ತಿದ್ದರು, ಗಡಿಗೆಪ್ಪ ಕಳುಹಿಸಿದ ಕಿಡಿಗೇಡಿಗಳ ದಾಳಿಗೆ ತುತ್ತಾದ ಅವರಿಬ್ಬರೂ ಸಾಕಷ್ಟು ಪ್ರತಿಭಟಿಸಿ ಗಾಯಗೊಂಡರು, ಪರಮೇಶ್ವರಮ್ಮ ಸಹಾಯಕ್ಕೆ ಕೂಗಿಕೊಂಡಾಗ ಆಕೆಯ ಬಾಯಿಯನ್ನು ಮುಚ್ಚಲಾಯಿತು. ತನ್ನ ರಕ್ಷಣೆಗೆಂದು ತನ್ನ ಬಳಿ ಇದ್ದ ಕತ್ತಿ ತೆಗೆದಾಗ ಆಕೆಯ ಕೈಯನ್ನ ಹಿಂದಕ್ಕೆ ಕಟ್ಟಿ ಕೆನ್ನೆಗೆ ಹೊಡೆಯಲಾಯಿತು. ಆಕೆ ಮೂಗಿನಲ್ಲೇ ಆಗಿದ್ದರೂ, ಗಾಯಗಳು ಮಾಯವಾಗುವುದೇ ತಡ ಸತ್ಯಾಗ್ರಹಕ್ಕೆ ಹೊರಡುವುದಾಗಿ ಹೇಳುತ್ತಿದ್ದರು.

ಮಹಿಳಾ ಸತ್ಯಾಗ್ರಹಿಗಳ ಮೇಲೆ ಹೆಚ್ಚಿನ ದುಷ್ಕೃತ್ಯಗಳು ಸಿದ್ಧಾಪುರ ತಾಲೂಕಿನ ಪೊಲೀಸರಿಂದ ನಡೆದವು, ಈ ಪ್ರದೇಶದಲ್ಲಿ ಉನ್ನತ ವರ್ಗದ ಸ್ತ್ರೀಯರು ಬಹು ಮುಖ್ಯ ಪಾತ್ರ ವಹಿಸಿದರು. ೧೯೩೦ ಏಪ್ರಿಲ್ ೧೭, ಮೇ ೯ ಮತ್ತು ೧೦ ರಂದು ನಡೆದ ಅಮಾನವೀಯ ಕೃತ್ಯಗಳು ಸ್ತ್ರೀತ್ವಕ್ಕೆ ಸವಾಲನ್ನೊಡ್ಡಿದ್ದವು. ಅಂದು ಅಕ್ಕುಂಜಿ ಮತ್ತು ಮಾವಿನಗುಂಡಿಯ ಮಹಿಳಾ ಸತ್ಯಾಗ್ರಹಿಗಳನ್ನು ರಸ್ತೆಯುದ್ದಕ್ಕೂ ಎಳೆಯುತ್ತಾ ಬೆತ್ತ ಹಾಗೂ ಚಾಟಿಯಿಂದ ಹೊಡೆದರು. ಸೀರೆಯನ್ನೆಳೆದ, ಹರಿದು ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಮೇ ೯ ರ ರಾತ್ರಿ ಮಾವಿನಗುಂಡಿಯ ಪೊಲೀಸ್ ಹವಾಲ್ದಾರ್ ಇಬ್ಬರು ಮಹಿಳಾ ಸತ್ಯಾಗ್ರಹಿಗಳಾದ ಮಂಜಮ್ಮ ಕರಜಗಿ ಮತ್ತು ದೇವಮ್ಮ ಹೆಮಗಾರ್‌ರಿಗೆ ಈ ರೀತಿ ಬೆದರಿಕೆ ಹಾಕಿದ್ದ, "ನಿಮಗೆ ಊಟ ಬೇಕೋ? ಗಂಡ ಬೇಕೋ? ಅಥವಾ ನಾನು ಬೇಕೋ?" ಇದೇ ಪೊಲೀಸ್ ಗೌರಮ್ಮನನ್ನು ನಿಕೃಷ್ಟವಾಗಿ ಕಂಡಿದ್ದ. ಈ ರೀತಿಯ ಪೊಲೀಸರ ವರ್ತನೆಗಾಗಿ ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬನಿಗೆ ಶಿಕ್ಷೆ ವಿಧಿಸಲಾಗಿತ್ತು.

ತಾಲ್ಲೂಕುಗಳು ದಬ್ಬಾಳಿಕೆಯ ಕೇಂದ್ರಗಳಾಗಿದ್ದವು. ಸಿದ್ಧಾಪುರ ತಾಲೂಕಿನ ಹೆರೂರಿನಲ್ಲಿ ಪುರುಷರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಅಂದರೆ ಅಪರಾಧಿಯಾಗಿ, ಬಂಧನಕ್ಕೊಳಪಟ್ಟಿದ್ದರಿಂದ ಹಾಗೂ ಗೃಹಬಂಧನದಲ್ಲಿದ್ದುದರಿಂದ ಅಲ್ಲಿ ಪುರುಷರ ಅಸ್ತಿತ್ವವೇ ಇಲ್ಲದಂತಾಗಿತ್ತು, ಆದರೆ ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ನಂಬಿಕೆಯನ್ನಿಟ್ಟಿದ್ದ ಜನರು ಎಂದಿಗೂ ಎದೆಗುಂದಲಿಲ್ಲ. ಮಹಿಳೆಯರೇ ಪರಿಣಾಮಕಾರಿಯಾಗಿ ಚಳವಳಿಯನ್ನು ನಿರ್ವಹಿಸುತ್ತಿದ್ದರು.

ಬ್ರಿಟಿಷ್ ಸರ್ಕಾರವು ಕಾಂಗ್ರೆಸ್‌ನ ಚಟುವಟಿಕೆಗಳನ್ನು ಸದೆಬಡಿಯುವುದರಲ್ಲಿ ನಿರತವಾಗಿದ್ದರೂ ಕರ್ನಾಟಕದಲ್ಲಿ ಚಳುವಳಿ ಅತ್ಯಂತ ಬಿರುಸಿನಿಂದಲೇ ಕೂಡಿತ್ತು. ಕ್ರಿಮಿನಲ್ ಪ್ರೊಸೀಜರ್ ಕೋಡ್ ಮತ್ತು ಪೊಲೀಸ್ ಕಾಯ್ದೆಗಳು, ಕಾಡು ಮತ್ತು ಉಪ್ಪಿನ ಕಾಯ್ದೆಗಳ ಭಂಗ, ಕರನಿರಾಕರಣೆ ದಿನನಿತ್ಯದ ಕಾರ್ಯಕ್ರಮಗಳಾಗಿದ್ದವು. ಈ ನಿಟ್ಟಿನಲ್ಲಿ ಅಂಕೋಲದ ನಾಡವರ್ ಸಿರಸಿ–ಸಿದ್ಧಾಪುರದ ಹವ್ಯಕರು ವಿಶೇಷ ಮನ್ನಣೆ ಗಳಿಸಿದ್ದಾರೆ. ಈ ಚಳವಳಿಯಲ್ಲಿ ಹೆಚ್ಚು ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಸೆರೆಮನೆ ಸೇರಿದ್ದರು.

ಸಿರಸಿ, ಸಿದ್ಧಾಪುರ, ಅಂಕೋಲಗಳಲ್ಲಿ ನಡೆಯುತ್ತಿದ್ದ ಹೋರಾಟವನ್ನು ನಿಯಂತ್ರಿಸಲು ಪ್ರದರ್ಶನಕಾರರ ಆಸ್ತಿಯನ್ನು ಮುಟ್ಟುಗೋಲು ಹಾಕುವುದು, ಲಾಟಿ ಪ್ರಹಾರ ಮತ್ತು ಬಂಧಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ಈ ಹಿನ್ನಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿದ ಮಹಿಳೆಯರ ಪಾತ್ರವನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಲಾಗಿದೆ, ಅವರ ಕಾರ್ಯಗಳು ಪಿಕೆಟಿಂಗ್, ಮೆರವಣಿಗೆ, ಹರಾಜ್‌ನಲ್ಲಿ ಆಸ್ತಿಯನ್ನು ಕ್ರಯಿಸಿದವರ ಮನೆಮುಂದೆ ಸತ್ಯಾಗ್ರಹಕ್ಕೆ ಸೀಮಿತವಾಗಿದ್ದವು. ಅಮಾನವೀಯ ಕೃತ್ಯಗಳನ್ನೆಸಗಿದಾಗ

ಅವರು ತೋರಿದ ಸಹನೆ, ಧೈರ್ಯ, ದೃಢತೆ, ಸ್ವಾತಂತ್ರ್ಯ ಹೋರಾಟದ ಅಧ್ಯಾಯಗಳಲ್ಲಿ ಮಹತ್ವಪೂರ್ಣವಾದುದು. ಕರ್ನಾಟಕದ ಹೆಮ್ಮೆಗೆ ಕಳಶಪ್ರಾಯದಂತಿದ್ದ ಈ ಪುತ್ರಿಯರು ಪುರುಷರ ಸಮಕ್ಕೆ ರಾಷ್ಟ್ರಪ್ರೇಮ, ತಾಳ್ಮೆ ಮತ್ತು ತ್ಯಾಗ ಮನೋಧರ್ಮವನ್ನು ಪ್ರದರ್ಶಿಸಿದ್ದರು. ಕೆಲವು ಘಟನೆಗಳು ಈ ಕೆಳಗಿನಂತಿವೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಹೆಚ್ಚೆಯಲ್ಲಿ ಮೊಟ್ಟ ಮೊದಲಿಗೆ ಸರ್ಕಾರ ಹರಾಜ್ ಹಾಕಿದ ಆಸ್ತಿಯನ್ನು ಹಿಂದೆ ಪಡೆಯುವ ಪ್ರಯತ್ನ ನಡೆಯಿತು. ಗೌರಮ್ಮ ಮಹಿಳೆಯರನ್ನು ಸಂಘಟಿಸುವ ಕಾರ್ಯದಲ್ಲಿ ನಿರತರಾದರು. ಅಲ್ಲದೆ ಕಾವೇರಮ್ಮ ಮತ್ತು ಲಕ್ಷ್ಮಮ್ಮರೊಂದಿಗೆ ಸತ್ಯಾಗ್ರಹದ ನಾಯಕತ್ವವನ್ನು ವಹಿಸಿಕೊಂಡರು. ಈ ಮೂವರು ಹೆಚ್ಚೆಯ ಪಾಟೀಲ್ ರಾಮಪ್ಪನ ಮನೆ ಮುಂದೆ ಧರಣಿ ಕುಳಿತರು. ಕಾರಣ, ರಾಮಪ್ಪ ಕೆಲವು ಪಾತ್ರೆಗಳನ್ನು ಮತ್ತು ಎಮ್ಮೆಗಳನ್ನು ಹರಾಜ್‌ನಲ್ಲಿ ಕ್ರಯಿಸಿದ್ದರು. ಅದನ್ನ ಹಿಂತಿರುಗಿಸುವವರೆಗೆ ತಾವು ಉಪವಾಸ ಮಾಡುವುದಾಗಿ ಮಹಿಳೆಯರು ಹಟ ಹಿಡಿದರು. ರಾಮಪ್ಪ ಬಗ್ಗಲಿಲ್ಲ ವೆಂಕಟರಾಮಯ್ಯನವರು ಅರೆಸ್ಟ್ ವಾರೆಂಟ್‌ನಲ್ಲಿದ್ದುದ್ದರಿಂದ ತಲೆತಪ್ಪಿಸಿಕೊಂಡಿದ್ದರು. ೩ ನೇ ದಿನ ರಾತ್ರಿ ಒಂದು ಮಹಿಳೆಯರ ಚಿಂತಾಜನಕ ಸ್ಥಿತಿ ಕಂಡು ಮರುಗಿದರು... ರಾಮಪ್ಪನ ಪತ್ನಿಗೂ ಕಸಿವಿಸಿಯಾಯಿತು. ಸಕಾರಣಕ್ಕಾಗಿ ಹೋರಾಟ ನಡೆಸುತ್ತಿರುವ ಮಹಿಳೆಯರ ಬಗ್ಗೆ ಪತಿಯಲ್ಲಿ ಮೊರೆ ಇಟ್ಟಾಗ, ಅದು ಆತನ ಹೃದಯವನ್ನು ಕಲಕಿತು. ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟು ತಾನು ಕ್ರಯಿಸಿದ್ದ ಎಮ್ಮೆಗಳನ್ನು ಅದರ ಒಡೆಯನಿಗೆ ಹಿಂತಿರುಗಿಸಿದ.

ಇದೇ ರೀತಿಯಲ್ಲಿ ಅಕ್ಕುಂಜಿಯ ಮಹದೇವಪ್ಪ ಗೌಡ ಕ್ರಯಿಸಿದ್ದ ಎಮ್ಮೆಗಳನ್ನು ಹಿಂತಿರುಗಿಸಲು ಆತನ ಮನೆ ಮುಂದೆ ಸತ್ಯಾಗ್ರಹ ನಡೆಸಲಾಯಿತು. ಮಹದೇವಪ್ಪ ಪೊಲೀಸರಿಗೆ ತಿಳಿಸಿದ. ಕಾನ್‌ಸ್ಟೇಬಲ್‌ಗಳೊಂದಿಗೆ ಸ್ಥಳಕ್ಕೆ ಧಾವಿಸಿದ ಸರ್ಕಲ್ ಇನ್‌ಸ್ಪೆಕ್ಟರ್ ಫೌಜದಾರ್ ಮತ್ತು ಶಾನುಬೋಗರು ಕೃಷ್ಣಶಿರಸಿಗೆ, ಅಣ್ಣಪ್ಪ ಹೆಗ್ಗಡೆ ಹಾಗೂ ಕೆಲವು ಮಹಿಳೆಯರನ್ನು ಥಳಿಸಿ ಸಿದ್ದಾಪುರಕ್ಕೆ ಕೊಂಡೊಯ್ದರು. ಆಗ ಸತ್ಯಾಗ್ರಹಿಗಳು ಮಹಿಳೆಯರ ಸುತ್ತ ಸಮಾವೇಶಗೊಂಡು ಘೋಷಣೆಗಳನ್ನು ಕೂಗಿದರು. ಅವರನ್ನೂ ಥಳಿಸಲಾಯಿತು. ಹೆಂಗಸರನ್ನು ತಾಲೂಕು ಆಫೀಸಿಗೆ ಕರೆದೊಯ್ಯಲಾಯಿತು. ಗೌರಮ್ಮನನ್ನು ಮಾತ್ರ ಬಂಧಿಸಲಾಗಿದೆಯೆಂದು ಉಳಿದವರು ಹಿಂತಿರುಗಬೇಕೆಂದು ಪೊಲೀಸ್ ತಿಳಿಸಿದ. ಆದರೆ ಗೌರಮ್ಮನೊಬ್ಬರನ್ನು ಬಿಟ್ಟು ಹೋಗಲು ಮೂವರು ಮಹಿಳೆಯರು ನಿರಾಕರಿಸಿದರು. ಮಾರನೆ ದಿನ ಕಚೇರಿಗೆ ಹಾಜರಾಗುವಂತೆ ತಿಳಿಸಿದಾಗ ಅದರಂತೆ ನಡೆದುಕೊಂಡರು. ಆದರೆ ಸಂಜೆ ಏಳು ಗಂಟೆಯವರೆಗೆ ಸತಾಯಿಸಿ, ನಂತರ ಗೌರಮ್ಮನನ್ನು ಬಿಟ್ಟು ಇತರರು ಹೋಗಬಹುದೆಂದು ತಿಳಿಸಿದಾಗ, "ಇದ್ದರೆ ಒಟ್ಟಿಗೆ ಹೋದರೆ ಒಟ್ಟಿಗೆ ಎಂದು ಮಹಿಳೆ" ಯರು ಉತ್ತರಿಸಿದರು. ಆಗ ಗೌರಮ್ಮನನ್ನು ಹಿಡಿದೆಳೆದು ಹೊಡೆದು ಒದೆದುದಲ್ಲದೆ, ಹೀನಾಯವಾಗಿ ಬೈದು ಲಾಕಪ್‌ನಲ್ಲಿಟ್ಟರು. ಗೌರಮ್ಮ ಆ ರಾತ್ರಿ ಆಹಾರ ಪಾನೀಯವನ್ನು ಸೇವಿಸಲಿಲ್ಲ. ಈ ವಾರ್ತೆ ತಿಳಿದುದೇ ತಡ ಅಕ್ಕುಂಜಿಯ ಮಹಿಳೆಯರನೇಕರು ಮಹದೇವಪ್ಪನ ಮನೆ ಮುಂದೆ ಸತ್ಯಾಗ್ರಹವನ್ನಾರಂಭಿಸಿದರೆ ಹೊಸ ಅಲೆಯನ್ನು ಎದುರಿಸಲು ಆತನಿಂದ ಸಾಧ್ಯವಾಗಲಿಲ್ಲ. ಮನೆಯ ಹೆಂಗಸರೇ ಆತನ ಬಗ್ಗೆ ಬಿರುನುಡಿಗಳನ್ನಾಡಿದರು. ಕೊನೆಗೆ ಮನನೊಂದ ತಿಮಹದೇವಪ್ಪ ಎಮ್ಮೆಯನ್ನು ಅದರ ಒಡೆಯನಿಗೆ ಹಿಂದಿರುಗಿಸಿದ.

ಸಿದ್ದಾಪುರ ತಾಲೂಕಿನ ಮಾವಿನಗುಂಡಿಯ ಪೊಲೀಸ್ ಹವಾಲ್ದಾರ್ ಹರಾಜ್‌ನಲ್ಲಿ ಎಮ್ಮೆ ಕ್ರಯಿಸಿದ್ದ. ಆಗ ಭುವನೇಶ್ವರಮ್ಮ ಮತ್ತು ಕಲ್ಯಾಣ ಲಕ್ಷ್ಮಮ್ಮ ಅನುಕ್ರಮವಾಗಿ ೩೧ ದಿನ ಮತ್ತು ೨೨ ದಿನಗಳ ಕಾಲ ಸತ್ಯಾಗ್ರಹ ನಡೆಸಿದರು. ಸುಂಕದ ಗುಮಾಸ್ತನೊಬ್ಬನು ಹರಾಜ್‌ನಲ್ಲಿ ಎಮ್ಮೆ ಕ್ರಯಿಸಿದ್ದರಿಂದ ಗಂಗಮ್ಮ, ಸೀತಮ್ಮ, ದೇವಮ್ಮ ಮತ್ತು ಭಾಗೀರತಮ್ಮ ಸತ್ಯಾಗ್ರಹ ಹೂಡಿದರು. ಈ ಮಹಿಳೆಯರನ್ನು ಹೊಡೆಯಲಾಯಿತು. ಸಹನೆ, ದೃಢತೆ ಈ ಬಾರಿಯೂ ಯಶಸ್ಸನ್ನ ತಂದುಕೊಟ್ಟಿತು.

ಅಂಕೋಲಾ ತಾಲೂಕಿನ ಮಹಿಳಾ ಸತ್ಯಾಗ್ರಹಿ

ಗಳ ಮೇಲೆ ನಡೆಸಿದ ದೌರ್ಜನ್ಯ ಕಡಿಮೆಯದ್ದಾಗಿರಲಿಲ್ಲ. ಸತ್ಯಾಗ್ರಹಿಗಳನ್ನು ಹೊರದೂಡಿ ಅವರ ಮನೆಗಳಿಗೆ ಬೀಗ ಹಾಕುತ್ತಿದ್ದರು. ನಿದ್ರಿಸುತ್ತಿದ್ದ ಶಿಶುವನ್ನು ಹೊರಬಯಲಲ್ಲಿ ಇಡುತ್ತಿದ್ದರು. ಮನೆಯ ಸಾಮಾನುಗಳನ್ನು ಬೀದಿಗೆಸೆಯುತ್ತಿದ್ದರು. ಬಲಾತ್ಕಾರದಿಂದ ಹೆಂಗಸರನ್ನು ಹೊರದಬ್ಬುತ್ತಿದ್ದರು. ಹೊಡೆತ, ಒದೆತಕ್ಕೆ ಇತಿಮಿತಿಗಳಿರಲಿಲ್ಲ. ಒಮ್ಮೆ ಬೊಮ್ಮಯ್ಯ ನಾಯಕನ ಮನೆಯ ಬೀಗ ಒಡೆದು ಮಹಿಳೆಯರು ಸತ್ಯಾಗ್ರಹಕ್ಕಾಗಿ ಒಳಗೆ ಕುಳಿತರು. ಕೂಡಲೇ ಪೊಲೀಸರು ಬಂದು ಅವರನ್ನು ಹೊರದಬ್ಬಿದರು. ಮನುದೇವಿ ಎಂಬುವವಳು ಪುನಃ ಆ ಮನೆಯಲ್ಲಿ ಬಂದು ಕುಳಿತಳು. ಆಕೆಯನ್ನು ಮತ್ತೆ ಹೊರನೂಕಲಾಯಿತು. ಆಕೆ ಪೊಲೀಸರ ಕೈಯಿಂದ ಬಿಡಿಸಿಕೊಂಡು ಮನೆಗೆ ನುಗ್ಗಲು ಯತ್ನಿಸಿದಾಗ ಆಕೆಯ ಕೂದಲನ್ನು ಹಿಡಿದು ನೆಲಕ್ಕಪ್ಪಳಿಸಿ ಮುಖಕ್ಕೆ ಹೊಡೆಯಲಾಯಿತಲ್ಲದೆ ಒದೆಯಲಾಯಿತು. ಬಡಪಾಯಿ ಮಹಿಳೆ ಮೂರ್ಛೆ ಹೋದುದನ್ನು ಕಂಡ ಪೊಲೀಸರು ಪಲಾಯನ ಮಾಡಿದರು. ಮನುದೇವಿಯನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಮಾರನೆ ದಿನ ಆಕೆಗೆ ಪ್ರಜ್ಞೆ ಬಂತು. ನಡೆಯಲು ಶಕ್ತಳಾದುದೇ ತಡ ಸತ್ಯಾಗ್ರಹಕ್ಕೆ ಸಿದ್ಧಳಾಗಿದ್ದಳು. ಈ ಬಾರಿ ಆಕೆಯನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು.

ಇಂತಹ ಅಮಾನವೀಯ ಕೃತ್ಯಗಳ ವಾರ್ತೆ ಲಂಡನ್‌ನನ್ನು ತಲುಪಿದವು. ಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡಿ ವರದಿ ಮಾಡಲು ಭಾರತೀಯ ಲೀಗ್ ೧೯೩೨ರಲ್ಲಿ ಒಂದು ನಿಯೋಗವನ್ನು ಕಳುಹಿಸಿತು. ಈ ನಿಯೋಗವು ಸೆಪ್ಟೆಂಬರ್ ೧೯೩೨ರಂದು ಸಿದ್ಧಾಪುರಕ್ಕೆ ಭೇಟಿ ನೀಡಿ ಅಲ್ಲಿಯ ಸರ್ಕಲ್ ಇನ್ಸ್ಪೆಕ್ಟರ್ ಮತ್ತು ಮಾಮ್‌ಲತದಾರ್ ಬಳಿ ಚರ್ಚಿಸುತ್ತಿದ್ದಾಗ ಮಹಿಳೆಯರ ಗುಂಪೊಂದು ಧಾವಿಸಿ ಪೊಲೀಸರಿಂದ ತಮಗಾದ ಗಾಯಗಳನ್ನು ಪ್ರದರ್ಶಿಸಿದರು. ಹಾಗೆಯೇ ಅಂಕೋಲಾಗೆ ಭೇಟಿ ನೀಡಿದಾಗ ಅಲ್ಲಿಯ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಗುಂಪೊಂದನ್ನು ಅಮಾನವೀಯವಾಗಿ ಬಡಿದುದರ ಬಗ್ಗೆ ತಿಳಿಸಿದರು.

ಮಕ್ಕಳನ್ನು ರಾಷ್ಟ್ರ ಸೇವೆಯಲ್ಲಿ ತೊಡಗುವಂತೆ ಮಾಡುವಲ್ಲಿ ಮಹಿಳೆಯರ ಪಾತ್ರ ಮೆಚ್ಚುವಂತಹದು. ಅಲಹಾಬಾದ್‌ನಲ್ಲಿ ಇಂದಿರಾಗಾಂಧಿ ತನ್ನ ಹನ್ನೆರಡನೇ ವಯಸ್ಸಿನಲ್ಲಿ "ವಾನರ ಸೇನೆ" ಕಟ್ಟಿದ್ದರು. ಇದು ೬೦೦೦ ಮಂದಿಯನ್ನೊಳಗೊಂಡಿತ್ತು. ಬಾಂಬೆಯಲ್ಲಿ ವಿದ್ಯಾ ಕಿಲ್ಲೆವಾಲ ಮತ್ತು ಕಮಲಾ ದೇವಿ, ಮದ್ರಾಸ್‌ನಲ್ಲಿ ರಾಮೇಶ್ವರಮ್ಮ ಅಂತಹ ಸೈನ್ಯ ಕಟ್ಟಿದ್ದರು. ಈ ಯುವ ಸೈನ್ಯ ಮೊದ ಮೊದಲು ಸರ್ಕಾರಕ್ಕೆ ಉಪದ್ರವಕಾರಿಗಳಂತಿದ್ದರು. ಆದರೆ ಸ್ವಾತಂತ್ರ್ಯ ಹೋರಾಟ ತೀವ್ರವಾಗುತ್ತಿದ್ದಂತೆ ರಾಷ್ಟ್ರೀಯ ಉದ್ದೇಶವನ್ನು ದೃಢತೆ ಮತ್ತು ಕೆಚ್ಚೆದೆಯಿಂದ ಸಾಧಿಸಲು ಸಿದ್ಧರಾದರು. ಲಾಟಿ ಏಟು ದೈಹಿಕ ಮತ್ತು ಮಾನಸಿಕ ಹಿಂಸೆ, ಸೆರೆಮನೆ ವಾಸ, ಬುಲೆಟ್‌ಗಳ ರುಚಿಯನ್ನುಂಡಿದ್ದಷ್ಟೇ ಅಲ್ಲದೆ ಪ್ರಾಣವನ್ನರ್ಪಿಸಲೂ ಹಿಂಜರಿಯಲಿಲ್ಲ.

ಸೆರೆಮನೆಯಲ್ಲಿ ಸ್ತ್ರೀಯರ ಸ್ಥಿತಿ ತುಂಬಾ ಕೆಟ್ಟದಾಗಿತ್ತು. ಬೆಂಗಳೂರು, ಬಳ್ಳಾರಿ, ಹಿಂಡಲಗಿ, ಬಿಜಾಪುರ ಜೈಲುಗಳಲ್ಲಿದ್ದ ರಾಜಕೀಯ ಖೈದಿಗಳ ಸ್ಥಿತಿ ಹೇಳತೀರದಾಗಿತ್ತು. ಸೆರೆಮನೆಗಳ ಸಂಖ್ಯೆ ಹೆಚ್ಚುತ್ತಿದ್ದಂತೆ "ಸಿ" ದರ್ಜೆಯ ಸೆರೆಮನೆಗಳಿಗೆ ಸ್ತ್ರೀಯರನ್ನು ಕಳುಹಿಸಲಾರಂಭಿಸಿದರು. ಇಲ್ಲಿಯ ಕೊಠಡಿಗಳು ಗಾಳಿ, ಬೆಳಕು, ನೀರು, ಸ್ವಚ್ಛತೆಯ ಕೊರತೆಯಿಂದ ಕೂಡಿದ್ದವು. ಇಲ್ಲಿಗೆ ಸರಬರಾಜಾಗುತ್ತಿದ್ದ ಆಹಾರ ಮನುಷ್ಯ ತಿನ್ನಲು ಯೋಗ್ಯವಾದುದಾಗಿರಲಿಲ್ಲ. ಧರಿಸಲು ಕೊಡುತ್ತಿದ್ದ ಬಟ್ಟೆಯೂ ಸಹ ತೊಡಲಾಗುತ್ತಿರಲಿಲ್ಲ. ಆದರೆ ಇಂತಹ ಸೆರೆಮನೆಗಳಿಗೂ ಸ್ತ್ರೀ — ಪುರುಷರೆನ್ನದೆ ಸೌಲಭ್ಯಗಳ ಕೊರತೆಯನ್ನು ಲೆಕ್ಕಿಸದೆ ಸಂತಸದಿಂದಲೇ ಮುನ್ನುಗ್ಗುತ್ತಿದ್ದರು. ಗರ್ಭಿಣಿ ಸ್ತ್ರೀಯರು ಸೆರೆಮನೆ ವಾಸವನ್ನನುಭವಿಸಲು ಹಿಂದೇಟು ಹಾಕಲಿಲ್ಲ. ಯುದ್ಧದ ಸಂಕೇತದಂತಿದ್ದ ಜೈಲುಗಳಲ್ಲಿ ಜನಿಸಿದ ಮಕ್ಕಳ ತಾಯಂದಿರು ಹೆಮ್ಮೆಯಿಂದ ತಮ್ಮ ಮಕ್ಕಳಿಗೆ "ಸೆರೆಮನೆಯ ರಾಜಕುಮಾರಿ" "ಹೋರಾಟದ ಒಡೆಯ" "ವಿಜಯ" ಇತ್ಯಾದಿ ನಾಮಕರಣ ಮಾಡುತ್ತಿದ್ದರು. ಆ ಮಕ್ಕಳು ಸೆರೆಮನೆ ವಾಸಿಗಳ ಸಮುದಾಯಕ್ಕೆ ಸೇರಿದವರಾಗಿದ್ದರು. ಅನಾಥ ಬಾಲಕಿಯರಿಗೆ ಹೊಸ ತಂದೆ–ತಾಯಿ ಲಭ್ಯವಾಗುತ್ತಿದ್ದರು.

ಮತ, ಧರ್ಮ, ಪ್ರತಿಷ್ಠೆಗಳ ಕೋಟೆಗಳನ್ನೊಡೆದು ಮಾನವೀಯ ಸಂಬಂಧಗಳು ಬಲವಾಗತೊಡಗಿದವು. ಅವರು ಒಂದೇ ಕುಟುಂಬದ ಸದಸ್ಯರಂತಿದ್ದರು.

೧೯೩೭ರಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಿದಾಗ ಮಹಿಳೆಯರು ಮುನಿಸಿಪಲ್ ಹಾಗೂ ಸ್ಥಳೀಯ ಬೋರ್ಡ್‌ಗಳ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು ಮತ್ತೆ ಕೆಲವರು ಮಂತ್ರಿಗಳಾಗಿ, ಅಧೀನ ಕಾರ್ಯದರ್ಶಿಗಳಾಗಿ. ಡೆಪ್ಯೂಟಿ ಸ್ಪೀಕರಾಗಿ. ಸ್ಥಳೀಯ ಸರ್ಕಾರಕ್ಕೆ ಸೇವೆ ಸಲ್ಲಿಸಿದರು. ಆ ವೇಳೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದಾಗಿ ಬಡಮಹಿಳೆಯರಲ್ಲೂ ರಾಜಕೀಯ ಪ್ರಜ್ಞೆ ಮೂಡಿತು.

೧೯೪೨ರಲ್ಲಿ ನಡೆದ “ಬ್ರಿಟಿಷರೇ ಭಾರತದಿಂದ ತೊಲಗಿ” ಚಳವಳಿಯಲ್ಲಿ ಮಹಿಳೆಯರ ಪಾತ್ರ ಪುರುಷರಷ್ಟೆ ಪರಿಣಾಮಕಾರಿಯಾಗಿತ್ತು. “ಮಾಡು ಇಲ್ಲವೇ ಮಡಿ” ಘೋಷಣೆ ಮಹಿಳೆಯರನ್ನು ಬಡಿದೆಬ್ಬಿಸಿತು. ಅಖಿಲ ಭಾರತ ಮಹಿಳಾ ಸಮ್ಮೇಳನ ೧೯೪೦ರಲ್ಲಿ ಬೆಂಗಳೂರಿನಲ್ಲಿ ನಡೆದಾಗ, ಈ ನಿರ್ಣಯವನ್ನು ಘೋಷಿಸಿತು. “ಯುದ್ಧಕ್ಕೆ ಬದಲಾಗಿ ಶಾಂತಿ ಹುಡುಕಲು ರಾಷ್ಟ್ರಗಳು ಶಸ್ತ್ರಾಸ್ತ್ರಗಳನ್ನ ದೂರವಿಡಬೇಕು. ಅಹಿಂಸೆಯಲ್ಲಿ ಹೆಚ್ಚಿನ ನಂಬಿಕೆ ಇಟ್ಟಿದ್ದೇವೆ. ಯುದ್ಧವು ಕಿತ್ತುಕೊಂಡ ಸ್ವಾತಂತ್ರ್ಯದ ಸಮಸ್ಯೆಯನ್ನು ಬಗೆಹರಿಸುವುದಿಲ್ಲ” ಎಂದು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ ಈಸೂರಿನ ೩ ಜನ ಮಹಿಳೆಯರ ಬಗ್ಗೆ ಹೇಳುವುದು ಉಚಿತ. ಮುಗ್ಧ ಬಾಲಿಕೆಗೆ ಗುಂಡಿಟ್ಟಾಗ ಆಕೆಯನ್ನು ರಕ್ಷಿಸಲು ಹಾಲಮ್ಮ, ಪಾರ್ವತಮ್ಮ ಹಾಗೂ ಸಿದಮ್ಮ ಆಪಾಯವನ್ನ ಲೆಕ್ಕಿಸದೆ ಮುನ್ನುಗ್ಗಿದ ಪರಿಣಾಮವಾಗಿ ಅವರು ಆಜೀವ ಪರ್ಯಂತ ಸೆರೆಮನೆಯಲ್ಲಿರಬೇಕಾಯಿತು. ಹಾಲಮ್ಮ ಅಮಲ್ದಾರರನ್ನು ಕೊಲ್ಲಲೆತ್ನಿಸಿದಳೆಂದು, ಪಾರ್ವತಮ್ಮ ಸತ್ತವರನ್ನ ಹೊಡೆದಳೆಂದು, ಸಿದ್ಧಮ್ಮ ಅಂಥದೇ ಕೃತವನ್ನೆಸಗಿದಳೆಂಬ ಆರೋಪವನ್ನ ಹೊರಿಸಿದರು. ಹೀಗೆ ಈಸೂರಿನ ದುರಂತ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪ್ರಮುಖವಾದುದು. ಪುರುಷರ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ ಹೆಂಗಸರು ಅಬಲೆಯರಲ್ಲ ಎಂಬುದನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೋರಿಸಿಕೊಟ್ಟಿದ್ದರು. ಒಟ್ಟಿನಲ್ಲಿ ಗಾಂಧೀಜಿಯವರ ಶ್ರಮದಿಂದಾಗಿ ಸೌಮ್ಯ, ಸಂಕೋಚ ಸ್ವಭಾವದ ಸ್ತ್ರೀಯರೂ ಬಲಶಾಲಿಗಳಾದದ್ದಂತೂ ದಿಟ.


ಭಾರತೀಯ ಮಹಿಳೆಯರೆಂದರೆ ಅಜ್ಞಾನ-ಅಂಧಶ್ರದ್ಧೆಯಲ್ಲಿ ಮುಳುಗಿರುವವರು ಮತ್ತು ಪುರುಷರ ಗುಲಾಮರೆಂದು ಪಾಶ್ಚಾತ್ಯ ವೀಕ್ಷಕರಾದ ಅಬೆ ದುಬಾಯ್ ಮತ್ತು ಮಿಸ್ ಮೇಯೊರವರಿಂದ ಪರಿಗಣಿಸಲ್ಪಟ್ಟಿದ್ದರು. ಆದರೆ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ತೋರಿದ ಸಹನೆ, ದೃಢತೆ ಮತ್ತು ತ್ಯಾಗ ಮನೋಭಾವವನ್ನ ಗಳಿಸಿದುದಾದರೂ ಹೇಗೆಂಬುದು ಅಚ್ಚರಿಯನ್ನುಂಟು ಮಾಡುತ್ತದೆ. ಅನಕ್ಷರಸ್ಥ ಅವಿದ್ಯಾವಂತ ಮಹಿಳೆಯರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಹೋರಾಟದಲ್ಲಿ ಮಗ್ನರಾದುದು ಅವರನು ಹೀಯಾಳಿಸುತ್ತಿದ್ದವರೇ ಪ್ರಶಂಸಿಸುವಂತೆ ಮಾಡಿತಲ್ಲದೇ, ಶಿಕ್ಷಣ ಅಥವಾ ಅಕ್ಷರತೆಯ ಕೊರತೆ ಸಂಸ್ಕೃತಿಗೆ ಕೊರತೆಯನ್ನುಂಟು ಮಾಡಲಿಲ್ಲ ಎಂಬ ಅಂಶವನ್ನು ಸಾಬೀತು ಪಡಿಸಿತು.

ಗ್ರಂಥ ಋಣ:

ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ

ಮೂಲ ಲೇಖಕರು:

ಪ್ರೊ|| ಜಿ. ಎಸ್. ಹಾಲಪ್ಪ.



ಸ್ತ್ರೀ - ಸಂಚಯ

ಬೆಳ್ಳಿಯ ಸಂಕೋಲೆಗಳು

ಲೇ:- ಮೈತ್ರೇಯಿ ಉಪಾಧ್ಯಾಯ.
ಅನು:- ವೈದೇಹಿ
ಪ್ರ:- ಅಕ್ಷರ ಪ್ರಕಾಶನ ಸಾಗರ, ಕರ್ನಾಟಕ.
ಪ್ರಕಟಣೆ:- ೧೯೮೫

ಮದುವೆಯಾದ ಮೊದಲ ಕೆಲವು ವರ್ಷಗಳಲ್ಲಿ ಹುಡುಗಿ ತಾನು ಸೇರಿದ ಮನೆಯ ಗೌರವ ಆದರ್ಶಗಳಿಗೆ ಅನುಸಾರವಾಗಿ ನಡೆಯಬೇಕೆಂದು ಅಪೇಕ್ಷಿಸಲ್ಪಡುತ್ತಾಳೆ. ಆಕೆ ಇರುವುದೇ ಮನೆಯ ಹಿರಿಯ ಹೆಂಗಸರ, ಮುಖ್ಯವಾಗಿ ಅತ್ತೆಯಾದವಳ, ಕಣ್ಣಡಿಯಲ್ಲಿ. ಪರಿಣಾಮವಾಗಿ ಅವಳು ಹೇಳಿದಂತೆ ಗೋಣು ಅಲ್ಲಾಡಿಸುವ ವಿಧೇಯಳಾಗಿರಬೇಕೆಂದೇ ಎಲ್ಲರೂ ನಿರೀಕ್ಷಿಸುತ್ತಾರೆ, ಮನೆಯ ವಿಚಾರಗಳನ್ನು ಚರ್ಚಿಸುವುದರಲ್ಲಾಗಲೀ ಆ ಕುರಿತು ನಿರ್ಣಯಕ್ಕೆ ಬರುವುದರಲ್ಲಾಗಲೀ ಆಕೆ ಪ್ರವೇಶಿಸುವಂತಿಲ್ಲ ಅಷ್ಟೇಕೆ ಮನೆಯ 'ಮರ್ಯಾದೆ'ಯಂತೆ ತನ್ನ ಗಂಡನೊಡನೆಯೂ ಇತರ ಗಂಡಸರೊಡನೆಯೂ ಮಾತುಕತೆಯಾಡುವುದು ಸಲ್ಲ. ಸುಸ್ಥಿತಿಯಲ್ಲಿರುವ ಮಾಧ್ಯಮ ವರ್ಗದಲ್ಲಿ ಅವಳ ನಡತೆಯನ್ನು ಹದ್ದುಬಸ್ತಿನಲ್ಲಿಡುವಂತಹ ಪರಂಪರಾಗತ ನೀತಿ ನಿಯಮ ಆದರ್ಶಗಳಂತೂ ಅತ್ಯಂತ ಜಿಗುಟು, ದಂಡನೆಯ ಸ್ವರೂಪದ್ದು. ಅವಳ ಸ್ಥಾನಮಾನದ ನಿರ್ಣಯವಾಗುವುದು ಆಕೆ ತನ್ನೊಂದಿಗೆ ತಂದ ಬಳುವಳಿಯ ಆಧಾರದ ಮೇಲೆ. ಇಂತಹ ಕುಟುಂಬಗಳಲ್ಲಿ ಮನೆಯ ಹಿರಿಯ ಹೆಂಗಸರೇ ಸ್ವಲ್ಪ ಒಳ್ಳೆಯ ಸ್ಥಿತಿಯಲ್ಲಿರುವವರು ಎನ್ನಬಹುದು. ಯಾಕೆಂದರೆ ಮಗಂದಿರು ದುಡಿದು ತಂದು ಹಾಕುವುದರಲ್ಲಿ ಮಗರನ್ನು, ಸೊಸೆಯಂದಿರು ಇನ್ನೂ ಎಳೆಯರು. ಹೀಗಾಗಿ ಇವರು ತಮ್ಮ ಬದುಕಿನ ಕೆಲವು ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುವುದು ಉಂಟು. ವ್ಯವಹಾರದ ವಿಷಯದಲ್ಲಾಗಲೀ ಆಸ್ತಿ ಸಂಬಂಧ ಚರ್ಚೆಯಲ್ಲಾಗಲೀ ಇಂತಹ ಕುಟುಂಬಗಳಲ್ಲಿ ಮನೆಯ ಹಿರಿಯ ಹೆಂಗಸರನ್ನು ಒಂದು ಮಾತು ಕೇಳುವ ಪರಿಪಾಠವುಂಟು. ಯಜಮಾನಿತಿ ಹದಿಹರೆಯದ ಸೊಸೆಯಂದಿರೊಡನೆ ಅಧಿಕಾರ ಸ್ಥಾನದಲ್ಲಿದ್ದು ನಡೆದುಕೊಳ್ಳುವವಳು. ಮನೆಯ ಗಂಡು ಮಕ್ಕಳ ಹಾಗೂ ಹೆಣ್ಣು ಮಕ್ಕಳ ಮದುವೆ ವಿಚಾರ ಮಾತ್ರ ಮನೆಯ ಹಿರಿಯರೆಲ್ಲರ ಸಂಯುಕ್ತ ನಿರ್ಧಾರಕ್ಕೆ ಬಿಟ್ಟದ್ದು.

ಮದುವೆಯಾದ ತಕ್ಷಣ ಸ್ವಂತ ಬದುಕು ಸಾಗಿಸಿದ ಮಹಿಳೆಯರು ಈ ದೇಶದಲ್ಲಿ ಬಹಳ ಕಡಿಮೆ. ಮೊದಲ ಕೆಲವು ಕಾಲವಾದರೂ ಅವರು ಅತ್ತೆ ಮನೆಯಲ್ಲಿರಬೇಕೆಂದು ಸಮಾಜ ನಿರೀಕ್ಷಿಸುತ್ತದೆ. ಹೆಣ್ಣು ನಮ್ರಳಾಗಿ ವಿಧೇಯಳಾಗಿ ಹೇಗೆಂದರೆ ಹಾಗೆ ಎಂಬಂತೆ ಇರಬೇಕಾಗುತ್ತದೆ. ವಿಚಾರದಲ್ಲಾಗಲೀ, ಕ್ರಿಯೆಯಲ್ಲಾಗಲೀ ಸ್ವತಂತ್ರ ಮನೋಭಾವವನ್ನು ಆಕೆ ತೋರಿದಳೇ, ದೊಡ್ಡ ರಾದ್ಧಾಂತವೇ ಆದೀತು.

ಸರಳವಾದ ಪುಟ್ಟ ಸಂಸಾರಗಳಲ್ಲಿ ಇಷ್ಟೆಲ್ಲ ಇಲ್ಲ. ಇಲ್ಲಿ ಹೆಣ್ಣು ತನ್ನ ಕುಟುಂಬದ ವಲಯದೊಳಗೆ ಹೆಚ್ಚು ಪ್ರಾಮುಖ್ಯತೆ ಪಡೆಯುವಳು. ತನ್ನದೇ ವರ್ತುಲದಲ್ಲಿ ಸ್ವಂತ ನಿರ್ಧಾರವನ್ನೂ ತೆಗೆದುಕೊಳ್ಳಬಲ್ಲಳು. ಬಡ ಆದಿವಾಸಿ ಜನಾಂಗಗಳಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಈ ಮಾದರಿಯ ಕುಟುಂಬಗಳನ್ನು ನಾವು ನೋಡುತ್ತೇವೆ. "ಒಂದು ರೀತಿಯಲ್ಲಿ ಸ್ಥಿತಿಗತಿಯಲ್ಲಿ ಬಡವರಾಗಿರುವ ಸ್ತ್ರೀಯರು ತಮ್ಮ ಸ್ಥಾನಮಾನಗಳಲ್ಲಿ ಮಾತ್ರ ಶ್ರೀಮಂತರು" ಎಂಬ ಮಾತಿನಲ್ಲಿ ಸತ್ಯವೂ ಇದೆ. ಆದರೆ ಈ ವೀಕ್ಷಣೆಯನ್ನು ಮೆಚ್ಚಿಕೊಳ್ಳುವ ಮುಂಚೆ ಒಂದು ವಿಚಾರ. ಜಾತಿಯೇ ಕೀಳು ಜಾತಿಯೆಂದ ಮೇಲೆ ಅವರ ಸ್ಥಾನಮಾನಗಳೂ ಜಾತಿಗೆ ಕವಿದ ನೈಚ್ಯದಿಂದ ಪಾರಾಗಲಾರವಷ್ಟೆ? ಅಷ್ಟೇ ಅಲ್ಲ ಕೂಲಿನಾಲಿ ಮಾಡಿ ಬದುಕುವ ಪರಿಸರದಲ್ಲಿ ಸ್ತ್ರೀಪುರುಷರಲ್ಲಿ ಅಷ್ಟಿಷ್ಟು ಸಮಾನತೆಯಿದ್ದರೂ ಒಟ್ಟು ಸಮಾಜದ ದೃಷ್ಟಿಯಿಂದ ನೋಡಿದರೆ ಈ ಹೆಂಗಸರ ಸ್ಥಾನ ನೀಚದಲ್ಲಿ ನೀಚ.

ನಾಳೆಯ ಭಾರ ಇವತ್ತೆ.

ಕುಟುಂಬ ಪರಿಸರದಲ್ಲಿ ಹೆಣ್ಣು ಮಕ್ಕಳನ್ನು ನಾಳೆ ಗಂಡನ ಮನೆಯಲ್ಲಿ ಆಕೆ ಹೇಗೆ ದಿನ ತೆಗೆಯಬೇಕೆಂಬ ದೃಷ್ಟಿಯನ್ನಿಟ್ಟುಕೊಂಡೇ ಬೆಳೆಸುತ್ತಾರೆ, ಆದ್ದರಿಂದ ಒಂದು ಹೆಣ್ಣು ಮಗು ಪಡೆಯುವ ಮೊದಲ ಪಾಠವೆಂದರೆ ಅವಳ ಮತ್ತು ಅವಳ ಸಹೋದರರ ಲಾಲನೆ-ಪಾಲನೆಯಲ್ಲಿರುವ ವ್ಯತ್ಯಾಸವೆಂಬುದು ಒಂದು ವಾಸ್ತವವಾಗಿ ಇರಬೇಕಾದ ಸತ್ಯ ಎಂಬುದು ಸೋದರರೋ, ಮುಂದೆ ಮನೆಯ ಆಸ್ತಿ ಸೊತ್ತುಗಳಿಗೆ ಬಾಧ್ಯರಾಗುವವರು ಆದರೆ ಹೆಣ್ಣು? ಯಾರದೋ ಮನೆಯವಳು, ಒಂದು ದಿನ ಹೊರಟು ಹೋಗುವವಳು. ಹೀಗಾಗಿ ಮನೆಯ ಸಂಪತ್ತು ಯಾವುದು ತನ್ನದಲ್ಲ ಎಂಬುದನ್ನೆಲ್ಲ ಗ್ರಹಿಸುತ್ತಲೇ ಆಕೆ ಬೆಳೆಯುತ್ತಾಳೆ. ಬಡ ಸಂಸಾರಗಳಲ್ಲಿ ತಾಯಿ ಮನೆಗೆಲಸಕ್ಕೆ ಹೋಗುವಾಗ ಮನೆಯಲ್ಲುಳಿದ ಕಂದಮ್ಮಗಳನ್ನು ನೋಡಿಕೊಳ್ಳುವ ಹೊಣೆ ಹಿರಿಯ ಹೆಣ್ಣು ಮಗಳಿಗೆ. ತಾಯಿಯ

ಜಾಗದಲ್ಲಿ ತಾನು ನಿಂತು ಆಕೆ ಮನೆವಾರ್ತೆಯ ಪಟ್ಟ ಕಟ್ಟಿಕೊಳ್ಳಬೇಕಾಗುತ್ತದೆ. ಏಳೆಂಟು ವರ್ಷದ ಪುಟಾಣಿಯ ಹೆಗಲಿನ ಮೇಲೆಯೇ ಇಂತಹ ಜವಾಬ್ದಾರಿಗಳು ಕುಳಿತಿರುತ್ತವೆ ಎಂದರೆ ಎಳವೆಯಲ್ಲಿಯೇ ಹೊಣೆ ಹೊರುವುದಕ್ಕೆ ತರಬೇತಿ ಸಿಕ್ಕಿದಂತೆ ಹಾಗೂ ಭವಿಷ್ಯದಲ್ಲಿ ಅವಳಾಡುವ ಪಾತ್ರದ ಪಾಳಿಯನ್ನೂ ಆಕೆಗೆ ನೀಡಿ ಸಿದ್ಧಗೊಳಿಸಿದಂತೆ. ಹೀಗಾಗಿ ವಿಧೇಯ ಮಗಳಿಂದ ಆಕೆ ವಿಧೇಯ ಸೊಸೆಯಾಗಿ ಪರಿವರ್ತನೆಗೊಳ್ಳುವಾಗ ಯಾವತ್ತೂ ಕಂಡರಿಯದ ಕಷ್ಟವೇನೂ ಆಗುವುದಿಲ್ಲ.

ಹೆಣ್ಣಿನ ಬೆಳವಣಿಗೆಯ ಹಂತದಲ್ಲಿ ಪ್ರಯೋಗವಾಗುವ ಇನ್ನೊಂದು ಕ್ರಮವೆಂದರೆ ಹೊರ ಪ್ರಪಂಚದೊಂದಿಗೆ ಆಕೆ ಬೆರೆತು ಮಾತುಕತೆಯಾಡುವ, ಜತೆಗೂಡಿ ವಿನೋದ, ವಿಹಾರಗಳಲ್ಲಿ ತೊಡಗುವ ಸ್ವಾತಂತ್ರ್ಯವನ್ನೇ ಚಿವುಟಿ ಹಾಕುವುದು. ಹೆಣ್ಣಿನ ಪಾವಿತ್ರ್ಯ ಮತ್ತು ಶೀಲಕ್ಕೆ ಮದುವೆಯ ಬಂಧನದಲ್ಲಿ ಬಹಳ ಮಹತ್ವವಿರುವುದರಿಂದ ಹೆಣ್ಣು ಮದುವೆಗೆ ಮುಂಚೆ ಕೆಟ್ಟು ಹೋಗದಂತೆ ಕಾಪಾಡಿಕೊಳ್ಳುವುದು ಅಗತ್ಯವಾಯಿತು. ಇನ್ನು ಹುಡುಗಿ ಋತುಮತಿಯಾದಳೆಂದರೆ ಅವಳನ್ನು ಮುತ್ತಿಕೊಳ್ಳುವ ನಿರ್ಬಂಧಗಳಿಗೆ ಇತಿಮಿತಿಯಿಲ್ಲ. ಈಗವಳ ತಮಾಷೆ, ಕುಶಾಲು, ಮಾತು, ನಗೆ ಏನಿದ್ದರೂ ಮನೆಮಂದಿ ಹಾಗೂ ನೆಂಟರಿಷ್ಟರೊಂದಿಗೆ ಮಾತ್ರ. ಹೊರ ಪ್ರಪಂಚದಲ್ಲಿ ಇಣುಕಿ ನೋಡುವುದು ಅಷ್ಟು ಸುಲಭವಲ್ಲ. ಹೀಗಾಗಿ ಆಕೆ ಸ್ವಂತಿಕೆಯಿಂದ ಬೆಳೆಯುವ ಅವಕಾಶವೇ ಕರಗಿ ಹೋಗಿ ಬಿಡುತ್ತದೆ.

ಮೂರನೆಯದಾಗಿ ಮನೆಯ ಬೇಕು ಬೇಡಗಳಿಗೆ ಅನುಗುಣವಾಗಿ ಹೇಗೆ ಬೇಕೋ ಹಾಗೆ ಹೊಂದಿಕೊಂಡು ತೃಪ್ತಿಯಿಂದ ಬದುಕುವ ಅಗತ್ಯವನ್ನು ಪದೇ ಪದೇ ಹೇಳುತ್ತಾ ಆಕೆಯ ಮನಸ್ಸಿನಲ್ಲಿ ಇದು ಬೇರೂರುವಂತೆ ಮಾಡಿಬಿಡುವುದು. ಸಂಸಾರವೇ ತಾಯಿಯಾದವಳ ಸಕಲ ಪ್ರಪಂಚ, ಮನೆಯ ಎಲ್ಲರ ತುರ್ತು ಅಗತ್ಯಗಳನ್ನು ನೋಡಿಕೊಳ್ಳುವುದೇ ಆಕೆಯ ಮುಖ್ಯ ಕೆಲಸ ಎಂಬುದನ್ನೇ ನಂಬುತ್ತಾ ಹುಡುಗಿ ಬೆಳೆಯುತ್ತಾಳೆ. ಮನೆ ಮಂದಿಯನ್ನು ಸಂತೋಷವಾಗಿಡುವುದರಲ್ಲಿ ತಾಯಿ ತನ್ನನ್ನೇ ಮರೆತುಕೊಂಡು ಮಾಡುವ ಅನನ್ಯ ತ್ಯಾಗ, ಎದುರಿಸುವ ಸಮಸ್ಯೆಗಳು, ಪಡುವ ಮಾನಸಿಕ ಯಾತನೆಗಳು ಗಣನೆಗೆ ತರುವಂತದ್ದಲ್ಲ! ಯಾಕೆಂದರೆ ತಾಯಿಯೆಂದರೆ ಏನು ಬಂದರೂ ಎದೆಕೊಡಬೇಕಾದ ಕಲ್ಲುಬಂಡೆಯಂತೆ!

ನಾಲ್ಕನೆಯದಾಗಿ ವ್ರತ ನೇಮ ಶಾಸ್ತ್ರ ಸಂಪ್ರದಾಯಗಳನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿ ಮನೆಯ ಹೆಂಗಸರದು ಎಂಬ ನಂಬಿಕೆ ಬಿತ್ತುವುದು. ವ್ರತ ನೇಮಗಳನ್ನು ಚಾಚೂ ತಪ್ಪದೆ ನಡೆಸುತ್ತಾ ಮನೆಯ ಧರ್ಮ ನೀ ನಿಯಮಗಳು ಮಣ್ಣು ಪಾಲಾಗದಂತೆ ನೋಡಿಕೊಳ್ಳುವ ಸ್ತಂಭಗಳೇ ತಾವೋ ಎಂಬಂತೆ ಹೆಣ್ಣು ಮಕ್ಕಳು ಬೆಳೆಯುತ್ತಾರೆ. ಇವು ಹಲವು ಸಲ ಅವರ ಬೆಳವಣಿಗೆಯನ್ನೇ ಜಡಗೊಳಿಸಿಬಿಡುತ್ತವೆ.

ಐದನೆಯ ಹಾಗೂ ಕೊನೆಯ ಲಕ್ಷಣವೆಂದರೆ ಹೆಣ್ಣು ಮಗು ಬೆಳೆಯುವಾಗ ಅವಳಲ್ಲಿರುವ ತಾಯ್ತನಕ್ಕೇ ಒತ್ತು ಹೆಚ್ಚು ಬೀಳುತ್ತದೆ. ಮನೆಯ ಗಂಡು ಮಕ್ಕಳ ಕಡೆಗೂ ಆಕೆಯ ನಡೆ-ನುಡಿಗಳು ಮಾತೃವಾತ್ಸಲ್ಯದಿಂದ ತುಂಬಿರಬೇಕೆಂಬ ಬೋಧನೆಗಳು ಅವಳ ಕಿವಿಯ ಮೇಲೆ ಬೀಳುತ್ತಿರುತ್ತವೆ. ಗಂಡು ಮಕ್ಕಳಿಗೆ ಸಂತೋಷವಾಗುವಂತಹ, ತೃಪ್ತಿ ತರುವಂತಹ ವರ್ತನೆಯನ್ನು ಆಕೆ ಹೊಂದುವಂತೆ ತಿದ್ದಿ ತೀಡುತ್ತಾರೆ. ಹೀಗಾಗಿ ಮನೆಯಲ್ಲಿ ಹೆಣ್ಣಿಗೊಂದು ಗಂಡಿಗೊಂದು ನೀತಿ ನಿಯಮವಿರುವ ಬಗ್ಗೆ ಆಕೆ ಕೆರಳುವುದೇ ಇಲ್ಲ. ಇವೆಲ್ಲ ಅವಳಿಗೆ ಒಗ್ಗಿ ಹೋಗಿರುತ್ತದೆ. ಅಲ್ಲದೆ ಮುಂದೆ ತಾನು ಹೆತ್ತ ಮಕ್ಕಳಲ್ಲಿಯೂ ಆಕೆ ಅರಿವಿಲ್ಲದೆಯೇ ಈ ಭೇದವನ್ನು ಮುಂದುವರಿಸಿಕೊಂಡು ಹೋಗುವ ಕೊಂಡಿಯಾಗುತ್ತಾಳೆ.

ಮದುವೆ: ಪಂಜರದಿಂದ ಪಂಜರಕ್ಕೆ:

ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನವನ್ನು ನಿರ್ಧರಿಸುವ ಬಹು ಮುಖ್ಯ ಸಂಸ್ಥೆ ಮದುವೆ. ಪಿತೃಪ್ರಧಾನ ಪದ್ಧತಿಯಲ್ಲಿ ವಿವಾಹ ಎಷ್ಟು ಮುಖ್ಯವೆಂದರೆ ವಿವಾಹಿತ ಪುರುಷ ಪಿತೃಧರ್ಮವನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಅರ್ಹನಾಗುತ್ತಾನೆ. ಎಂದ ಮೇಲೆ ಹೆಣ್ಣಿಗೆ ವಿವಾಹವೆಂದರೆ ತವರಿನಿಂದ ಪತಿಗೃಹಕ್ಕೆ ಸಾಗಿ ಬರುವ ಒಂದು ಕ್ರಿಯೆ. ಸ್ವಂತ ಅಧಿಕಾರದ ಮೇಲೆ ಆಕೆಗೆ ಯಾವ ಬೆಲೆಯೂ ಇಲ್ಲ, ಪಾತ್ರವೂ ಇಲ್ಲ. ಮುಂದೆ ಆಗಲಿರುವ ಸಂತಾನೋತ್ಪತ್ತಿ, ಅದರ ಲಾಲನೆ-ಪಾಲನೆ ಎಲ್ಲವೂ ಆಕೆ ವಿವಾಹವಾಗಿ ಬಂದ ಕುಟುಂಬಕ್ಕೆ ಸೇರುವುದರಿಂದ ಮಗುವಿನ ಜನನ ಧರ್ಮ ಸಮ್ಮತವಾಗಿರಬೇಕೆಂದು ಪಿತೃಪ್ರಧಾನ ಪದ್ಧತಿ ಆಗ್ರಹಪೂರ್ವಕವಾಗಿ ಬಯಸುತ್ತದೆ. ಇಲ್ಲಿ ಮಗುವಿನ ತಂದೆ ಯಾರೆಂಬ ಪ್ರಶ್ನೆ ಬಲು ಮುಖ್ಯದ್ದು. ಯಾಕೆಂದರೆ ಆ ಮಗು ಮುಂದೆ ಮನೆತನದ ಕೀರ್ತಿ ಗೌರವ ಹಾಗೂ ಆಸ್ತಿಗಳಿಗೆ ನ್ಯಾಯಬದ್ಧ ವಾರಸುದಾರನಾಗಲಿರುವವನು. ಹೀಗಾಗಿ ಹೆಣ್ಣಿನ ಲೈಂಗಿಕ ಸಂಬಂಧವೆಂದರೆ ಹದ್ದುಬಸ್ತಿಗೊಳಪಡಲೇ ಬೇಕಾದ ವಿಷಯ.

ವಿವಾಹ ಪೂರ್ವದಲ್ಲಿಯೂ, ಎಂದರೆ ತವರಿನಲ್ಲಿಯೂ ಆಕೆ ಒಂದು ಅಂಕೆಯೊಳಗಿರುತ್ತಾಳಷ್ಟೆ? ಎಳವೆಯಲ್ಲಿಯೇ, ಹಲವೊಮ್ಮೆ ಇನ್ನೂ ಋತುಮತಿಯರಾಗುವ ಮೊದಲೇ, ಅವಳಿಗೆ ಮದುವೆಮಾಡಿ ಬಿಡುವುದು ಇನ್ನೊಂದು ಬಗೆಯಲ್ಲಿ ಅವಳ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವ ಮಾರ್ಗ. ವಿವಾಹದ ಕನಿಷ್ಟ ವಯಸ್ಸನ್ನು ಕಾನೂನು ನಿಗದಿಗೊಳಿಸಿದ್ದರೂ ಇಂಡಿಯಾದಲ್ಲಿ ಬಾಲ್ಯ ವಿವಾಹದ ಸಮಸ್ಯೆ ಪರಿಹಾರವಾಗದೇ ಉಳಿದಿದೆ. ಆದಿಕಾಲದಿಂದ ಹರಿದು ಬಂದ 'ಘನ' ಪರಂಪರೆ ಎದುರು ಕಾನೂನು ವಿಧಿಸುವ ಪ್ರತಿಬಂಧಕಗಳು ಎಲ್ಲಿ! ಕೇವಲ ಒಂದು ಶತಮಾನದ ಕೆಳಗೆ ಬಾಲ್ಯವಿವಾಹವೆಂಬುದು ಅತಿ ಸಾಮಾನ್ಯವಾಗಿದ್ದ ಪದ್ಧತಿಯಾಗಿತ್ತು. ಈಗ ಎಷ್ಟೋ ಪಾಲು ಅಳಿಸಿಹೋಗಿದೆ.

ಬಾಂಬೆಯ ಮಹಿಳಾ ಶೋಷಣೆಯ ವಿರುದ್ಧದ ವೇದಿಕೆ.

ರಾಜ್ಯ, ಸರ್ಕಾರಗಳ ಜೊತೆಗಿನ ನಮ್ಮ ಸಂಬಂಧ ಯಾವಾಗಲೂ ವೈರುಧ್ಯಗಳಿಂದಲೇ ಕೂಡಿವೆ. ಮಹಿಳಾ ಸಂಘ–ಸಂಸ್ಥೆಗಳಲ್ಲಿರುವ ನಾವು ಯಾವಾಗಲೂ ನಮ್ಮ ಪ್ರತಿಯೊಂದು ಕ್ರಿಯೆ ಅಥವಾ ಯಾವುದೇ ಹೋರಾಟದಲ್ಲಿ ರಾಜ್ಯ ಹಾಗೂ ಅದರ ಕಾರ್ಯ ನಿರ್ವಾಹಕ ವ್ಯವಸ್ಥೆಗಳನ್ನು ಎದುರಿಸಬೇಕಾಗುತ್ತದೆ, ನಮ್ಮದು ಯಾವಾಗಲೂ ಒಂದು ರೀತಿ ಬಿಗಿದು ಕಟ್ಟಿದ ಹಗ್ಗದ ಮೇಲೆ ನಡೆದ ಸ್ಥಿತಿಯಾಗಿರುತ್ತದೆ. ಒಂದು ಕಡೆ ನಾವು ಹಲವಾರು ಬೇಡಿಕೆಗಳನ್ನು ರಾಜ್ಯದ ಮುಂದಿಟ್ಟು, ಅದು ಇವುಗಳನ್ನು ಮನ್ನಿಸಬೇಕೆಂದು ಆಶಿಸುತ್ತೇವೆ. ಜೊತೆಗೇ ರಾಜ್ಯದ ಶೋಷಿತ ಹಾಗೂ ಅದರ ಪಿತೃ ಪ್ರಧಾನ ಪ್ರವೃತ್ತಿಯ ಬಗ್ಗೆ ವಿರೋಧಿಸುತ್ತೇವೆ. ಈ ಎಲ್ಲಾ ವರ್ಷಗಳಲ್ಲೂ ಈ ರೀತಿಯ ದ್ವಂದ್ವಗಳನ್ನು ನಾವು ಅನುಭವಿಸಿದ್ದೇವೆ. ಒಂದು ಕಡೆ ನಾವು ನಿರಂತರವಾಗಿ ಕಾನೂನು, ಕಟ್ಟಳೆಗಳಲ್ಲಿ, ಪೊಲೀಸರ ನಡತೆಗಳಲ್ಲಿ ಹಾಗೂ ರಾಜ್ಯದ ಇತರ ಕಾರ್ಯ ನಿರ್ವಾಹಕ ಸಂಸ್ಥೆಗಳಲ್ಲಿ ಇರುವ ಅನ್ಯಾಯ, ಅಸಮಾನತೆಯ ಬಗ್ಗೆ ಕೆಲಸ ಮಾಡುತ್ತೇವೆ. ಸಮಾನತೆಯ ದೃಷ್ಟಿಕೋನ ನಿರೂಪಿಸುವ ಹಾಗೂ ಅದಕ್ಕಾಗಿ ಬೇಡಿಕೆಯನ್ನು ಮಂಡಿಸುವ ಎರಡೂ ಕ್ರಿಯೆಗಳು ನಮಗೆ ಮುಖ್ಯವಾಗಿವೆ. ಇಂತಹವುಗಳು ಕಾಗದದಲ್ಲಿ ಮಾತ್ರ ಉಳಿಯಬಹುದಾದರೂ ಈ ಕೆಲಸಗಳನ್ನು ನಾವು ಮಾಡಬೇಕಾಗುತ್ತದೆ. ಇನ್ನೊಂದು ಕಡೆ ನಮ್ಮ ಜೀವಗಳನ್ನು ರಕ್ಷಿಸುವ ನೆಪಕ್ಕಾಗಿ ನಾವು ರಾಜ್ಯಕ್ಕೆ ಹೆಚ್ಚು ಅಧಿಕಾರ ಕೊಡುತ್ತೇವೆ. ಉದಾಃ ಹರಣೆಗೆ ಅತ್ಯಾಚಾರವೆಸಗಿದವನ ಮೇಲೆ ಅಥವಾ ಹೆಂಡತಿಯನ್ನು ಕೊಲೆ ಮಾಡಿರುವವನ ಮೇಲೆ ಹೆಚ್ಚು ಕಠಿಣ ಶಿಕ್ಷೆ ವಿಧಿಸುವುದರ ಹೆಚ್ಚಿನ ಅಧಿಕಾರವನ್ನು ರಾಜ್ಯದಿಂದಲೇ ನಾವು ಅಪೇಕ್ಷಿಸುತ್ತೇವೆ.

ಕಾನೂನುಗಳಲ್ಲಿ ಬದಲಾವಣೆಯನ್ನುಂಟು ಮಾಡುವ ಹಲವಾರು ಸಂದರ್ಭದಲ್ಲಿ ಸಮೂಹ ಪ್ರಜ್ಞೆಯನ್ನು ಹುಟ್ಟು ಹಾಕುವಲ್ಲಿ ಯಶಸ್ವಿಯಾಗಿದೆ. ಅಂದರೆ ಇದು ಸಾರ್ವಜನಿಕರಲ್ಲಿ ಚರ್ಚೆ ಮಾಡುವ ಅವಕಾಶ ಕಲ್ಪಿಸಿಕೊಟ್ಟಿದೆ. ಆದರೆ ಕೆಲವೇ ಕಾನೂನುಗಳಲ್ಲಿ ಬದಲಾವಣೆಯಾದೊಡನೆಯೇ ಇದೇ ನಮ್ಮ ಹೋರಾಟಗಳಿಗೆ ಅಡ್ಡಿಯಾಗಿದೆ. ಉದಾಃಹರಣೆ ಅತ್ಯಾಚಾರದ ಬಗ್ಗೆಗಿನ ಕಾನೂನುಗಳು ಅಪಕ್ವವಾಗಿ ಬದಲಾವಣೆಯಾದಾಗ್ಯೂ, ಅಷ್ಟೇ ಬದಲಾವಣೆಯಿಂದಾಗಿ ಆ ಬಗ್ಗೆಗಿನ ಹೋರಾಟಕ್ಕೆ ಒಂದು ರೀತಿಯ ತಡೆ ಕಂಡು ಬರುತ್ತದೆ.

ನಾವು ರಾಜ್ಯಕ್ಕೆ ವಿರುದ್ಧವಾಗಿದ್ದು, ಅದರ ಪಿತೃ ಪ್ರಧಾನ ಪೂರ್ವಗ್ರಹ ಪೀಡಿತ ಗ್ರಹಿಕೆಯನ್ನು ಅರ್ಥ ಮಾಡಿಕೊಂಡಾಗ್ಯೂ, ಇಂದು ಹೆಂಗಸರ ಅಧಿಕಾರರಹಿತ ಪರಿಸ್ಥಿತಿಯಿಂದಾಗಿ ಬಹಳಷ್ಟು ಸಂದರ್ಭಗಳಲ್ಲಿ ನಾವು ರಾಜ್ಯದ ಜೊತೆ ಒಪ್ಪಂದ ಮಾಡಿಕೊಳ್ಳುವಂತಹ ಸ್ಥಿತಿಗೆ ತಳ್ಳಿ ಬಿಡುತ್ತದೆ.

ನಾವು ಆಶಿಸುವಂತಹ ರಾಜ್ಯ ರಹಿತ ಸಮಾಜದ ಕಲ್ಪನೆಯಲ್ಲಿ ಈ ದ್ವಂದ್ವ ಇನ್ನೂ ಹೆಚ್ಚಾಗುತ್ತದೆ. ರಾಜ್ಯಕ್ಕೆ ಹೆಚ್ಚಿನ ಅಧಿಕಾರ ಕೊಡುವಂತಹ ಬೇಡಿಕೆಗಳು ಮುಂದೆ ನಾವು ಆಶಿಸುವಂತಹ ಸಮಾಜಕ್ಕೆ ಯಾವ ರೀತಿಯ ಪೆಟ್ಟನ್ನು ದೀರ್ಘ ಕಾಲದ ಅವಧಿಯಲ್ಲಿ ಕೊಡುತ್ತವೆ ಎಂಬುದನ್ನು ನಾವು ಯೋಚಿಸುತ್ತಿದ್ದೇವೆಯೇ?

ರಾಜ್ಯದ ಕೆಲವು ಸ್ಪಷ್ಟ ಕಾರ್ಯ–ನಿರ್ವಾಹಕ ಅಂಗಗಳೊಡನೆ, ನ್ಯಾಯಾಂಗ, ಪೊಲೀಸ್ ಜೊತೆಗಿನ ನಮ್ಮ ಅನುಭವಗಳಿಂದಾಗಿ ಈ ರೀತಿಯ ದ್ವಂದ್ವಗಳನ್ನು ನಿರ್ವಹಿಸುವಲ್ಲಿ ನಾವು ಹೆಚ್ಚು ಜಾಗರೂಕರಾಗಿರುವ ಹಾಗೂ ಪ್ರಜ್ಞಾವಂತರಾಗಿರುವ ಅವಶ್ಯಕತೆಯನ್ನು ಮನಗಾಣಿಸಿವೆ.

ನ್ಯಾಯಾಂಗ ಮತ್ತು ಲೋಕಸಭೆ:–

ಈ ವೇದಿಕೆ ಪ್ರಾರಂಭವಾದಾಗಿನಿಂದ ಅತ್ಯಾಚಾರದ ವಿರುದ್ಧ ಹೋರಾಡುತ್ತಿದ್ದು. ೧೯೮೦ರಲ್ಲಿ ಅತ್ಯಾಚಾರದ ಕಾಯಿದೆಯ ಬದಲಾವಣೆಯೇ ನಮ್ಮ

ಚಳವಳಿಯ ಕೇಂದ್ರ ಬಿಂದುವಾಗಿತ್ತು. ಈ ಚಳುಯಿಂದಾಗಿ ೧೯೮೦ರಲ್ಲಿ ಒಂದು ಕಾನೂನು ಸಮಿತಿ ನೇಮಿಸಲ್ಪಟ್ಟಿತು. ಈಗ ಹತ್ತು ವರ್ಷಗಳಾದ್ದಾಗ್ಯೂ ಅತ್ಯಾಚಾರದ ಕಾನೂನುಗಳು ನಮಗಿನ್ನೂ ಕ್ಲಿಷ್ಟ ಸಮಸ್ಯೆಗಳಾಗಿಯೇ ಉಳಿದುಕೊಂಡಿವೆ, ಇರುವ ಕಾನೂನುಗಳಲ್ಲಿ ಇಂತಹ ಅನೇಕ ಬದಲಾವಣೆಗಳೇನೋ ಆಗಿವೆ. ಅಮ್ನಿಯೋಸಿಂಥೆಸಸ್ ಬಗ್ಗೆ ಹಾಗೂ ಮನೆಯಲ್ಲಿ ಹೆಂಗಸರ ಮೇಲೆ ನಡೆಯುವ ಹಿಂಸೆಯ ಬಗ್ಗೆ ರಾಜ್ಯದಿಂದ ಕಾನೂನುಗಳನ್ನು ಮಾಡಿದಾಗಲೂ ಸಹ, ಹೆಂಗಸರ ಸ್ಥಿತಿಯನ್ನು ಬದಲಾವಣೆ ಮಾಡುವಲ್ಲಿ ಏನೇನೂ ಉಪಯುಕ್ತವಾಗಲಿಲ್ಲ. ಒಂದು ಕಡೆ ಈ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಇರುವ ಧೀರ್ಘಾವಧಿಯ ಜೊತೆಗೆ ರಾಜ್ಯಕ್ಕೆ ಸಹ ಇವುಗಳನ್ನು ಹೆಚ್ಚು ಪ್ರಬಲವಾಗಿ ಜಾರಿಗೊಳಿಸಬೇಕೆಂಬ ಆಸಕ್ತಿಯೂ ಇರಲಿಲ್ಲ. ಈ ಕಾನೂನುಗಳಲ್ಲಿ ಬದಲಾವಣೆಯ ಜೊತೆಗೇ ಹೆಂಗಸರಿಗೆ ವಿರೋಧಾತ್ಮಕವಾದ ಕಾಯಿದೆಗಳನ್ನು ರಾಜ್ಯ ಜಾರಿಗೊಳಿಸಿತು. ಉದಾಹರಣೆಗೆ, ಸತಿ ವಿರುದ್ಧದ ಹಾಗೂ ಅಮ್ನಿಯೋಸಿಂಥೆಸಿಸ್ ಕಾಯಿದೆ ಕಾನೂನುಗಳಿಗೆ ಬಲಿ ಪಶುಗಳಾದವರು ಮಹಿಳೆಯರೇ. ಇನ್ನೂ ಹೆಚ್ಚಿನ ಪ್ರತಿಗಾಮಿಯಾಗಿ ಬಂದ ಕಾನೂನೆಂದರೆ ಮುಸ್ಲಿಂ ಮಹಿಳೆಯರ ಸಂರಕ್ಷಣಾ ಬಿಲ್.

ಕಾನೂನು ಬದಲಾವಣೆಗಳಲ್ಲಿರುವ ಮಿತಿಯನ್ನು ಗುರುತಿಸಿದ್ದಾಗ್ಯೂ ಸಹ, ನಾವು ಈ ರೀತಿಯ ಬದಲಾವಣೆಗಳು ಜನರಲ್ಲಿ ಚರ್ಚೆ ಹಾಗೂ ಪ್ರಜ್ಞೆ ಹುಟ್ಟು ಹಾಕುವಲ್ಲಿ ಯಶಸ್ವಿಯಾಗುತ್ತವೆಂದು ನಾವು ತಿಳಿಯುತ್ತೇವೆ. ಎರಡನೆಯದಾಗಿ ಕಾನೂನುಗಳಲ್ಲಿನ ಹೋರಾಟಗಳು ಕಾನೂನುಗಳನ್ನು ಬದಲಾವಣೆಯನ್ನಷ್ಟೇ ಅಲ್ಲದೇ ಅನಾವಶ್ಯಕವಾಗಿ ಧೀರ್ಘಕಾಲ ಎಳೆಯುವ ಕ್ಲಿಷ್ಟ ನ್ಯಾಯಾಂಗ ವಿಧಾನಗಳನ್ನು ಬದಲಾಯಿಸುವತ್ತ ನಮ್ಮ ಗಮನ ಹರಿಸಬೇಕಾಗುತ್ತದೆ. ಜೊತೆಗೆ ಕಾನೂನುಗಳ ಬಗ್ಗೆ ನಾವು ನಮ್ಮದೇ ದೃಷ್ಟಿಕೋನವನ್ನು ನಾವು ಹೊಂದಬೇಕಾಗುತ್ತವೆ.

ಈ ವೇದಿಕೆಯು ಮಹಿಳೆ ಹಾಗೂ ಮಹಿಳಾ ಗುಂಪುಗಳ ಮಧ್ಯ ಭೇಧವಿಲ್ಲದ ಸಮಾನ ಕಾನೂನು ವಿಧಗಳ ಬಗ್ಗೆ ಚರ್ಚೆಯನ್ನು ಹುಟ್ಟು ಹಾಕಿವೆ. ಈ ಹಂತದಲ್ಲಿ ರಾಜ್ಯದಿಂದ ಯೂನಿಫಾರಂ ಫ್ಯಾಮಿಲಿ ಕೋಡ್‌ನಂತಹ ಸಮೂಹ ತತ್ವವನ್ನು ರೂಪಿಸಬೇಕೆಂದು ಬೇಡಿಕೆಯನ್ನು ನಾವು ಇಡುತ್ತಿದ್ದೇವೆ.

ನ್ಯಾಯಾಂಗವು ಮಹಿಳೆಯರಿಗೆ ಹೆಚ್ಚು ಸಹಾಯಕವಾಗಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಹಾಗೂ ದಾಖಲಾಗಿರುವ ವಿಚಾರ. ನ್ಯಾಯಾಂಗದ ತಾಂತ್ರಿಕತೆಗಳಿಂದಾಗಿ, ವಿಧಿ, ವಿಧಾನಗಳಿಂದಾಗಿ, ಸಾಕ್ಷಿ, ಲಿಂಗಾಧಾರಿತ ನಡತೆಗಳಿಂದಾಗಿ ಬಹಳ ಜನ ಅತ್ಯಾಚಾರಿಗಳು ಹೆಂಡಂದಿರನ್ನು ಕೊಂದ ಗಂಡಸರು ಇಂತಹವರು ಬಿಡುಗಡೆಯಾಗಿದ್ದಾರೆ. ಅಂದರೆ ಸಮಸ್ಯೆಯಿರುವುದು ಕಾನೂನಿನಲ್ಲಿ, ಅದರ ವಿಧಿ ವಿಧಾನದಲ್ಲಿ ಮಾತ್ರವಲ್ಲ; ಅದನ್ನು ವ್ಯಾಖ್ಯಾನಿಸುವವರಲ್ಲಿಯೂ ಸಮಸ್ಯೆ ಅಡಕವಾಗಿದೆ. ನ್ಯಾಯಾಲಯಗಳ ಮುಂದೆ ನಡೆಸಿದ ಧರಣಿಗಳು, ತೀರ್ಪನ್ನು ಪ್ರಶ್ನಿಸಿ ಹಾಕಿದ ರಿಟ್‌ಗಳು, ತೀರ್ಪನ್ನು ಪ್ರಶ್ನಿಸಿ ಮಾಡಿದ ಟೀಕೆಗಳು ಇವುಗಳೇ ನಮ್ಮ ಕಾರ್ಯವಿಧಾನಗಳಾಗಿ ಮುಂದುವರಿಯಬೇಕಾಗಿದೆ. ಸಾರ್ವಜನಿಕ ಆಸಕ್ತಿಯ ಲಿಟಿಗೇಷನ್‌ನ್ನು ಪರಿಚಯಿಸಿರುವುದು ಅತ್ಯಂತ ಹೆಚ್ಚು ಅನುಕೂಲಕರ ಸಂಗತಿಯಾಗಿದೆ.

ಪೊಲೀಸ್: ರಾಜ್ಯದ ಇನ್ನೊಂದು ಅಂಗ ಪೊಲೀಸ್ ನಾವು ಒತ್ತಾಯಪೂರ್ವಕವಾಗಿ ಯಾವಾಗಲೂ ಎದುರಿಸಬೇಕಾದವರು. ಪೊಲೀಸ್ ಠಾಣೆಯೊಳಗೆ ನಡೆದ ಅತ್ಯಾಚಾರದ ಪ್ರಕರಣದಿಂದಲೇ ನಾವು ಪ್ರಾರಂಭಿಸುದುದು. ಈ ಹಂತದಲ್ಲಿ ಪೊಲೀಸರೊಟ್ಟಿಗೆ ನೇರ ಘರ್ಷಣೆಗಳಾಗಿದ್ದವು. ಅಲೆಮಾರಿ ಕಟ್ಟಡ ಕೆಲಸದ ಹೆಂಗಸಿನ ಮೇಲೆ ನಡೆದ ಗುಂಪು ಅತ್ಯಾಚಾರದ ಪ್ರಕರಣದಲ್ಲಿ ನಾವು ಕೇಸ್ ಹಾಕಿದ್ದರಿಂದ ನಮ್ಮ ಹನ್ನೊಂದು ಜನರನ್ನು ಬಂಧಿಸಬೇಕೆಂದು ವಾರೆಂಟ್ ತರಲಾಯಿತು.

ಅಂದಿನಿಂದ ಪೊಲೀಸರ ನಡತೆಯಲ್ಲಿ ಸಾಂದರ್ಭಿಕವಾದ, ಮೇಲ್ಮಟ್ಟದ ಬದಲಾವಣೆಗಳಾಗಿವೆ. ತರಬೇತಿ ಕಾರ್ಯಕ್ರಮಗಳಲ್ಲಿ ಮಹಿಳಾ ದೃಷ್ಟಿಕೋನವನ್ನು ಸೇರಿಸುವುದಕ್ಕೆ ಸಾಕಷ್ಟು ಪ್ರಯತ್ನ

ಗಳಾಗಿವೆ. ಅದಾಗ್ಯೂ ಇಂದೂ ಸಹ ಮಹಿಳೆಗೆ ಅತ್ಯಾಚಾರದ ಅಥವಾ ಮನೆಯಲ್ಲಿ ನಡೆಯುವ ಹಿಂಸೆಯ ಬಗ್ಗೆ ಕೇಸುಗಳನ್ನು ದಾಖಲಿಸುವುದು ಹಾಗೂ ಪೊಲೀಸರಿಂದ ಯಾವುದೇ ಸಹಾಯ ನಿರೀಕ್ಷಿಸುವುದೂ ಅಸಾಧ್ಯವಾಗಿದೆ.

ಒಂದು ಕಡೆ ನೊಂದ ಹೆಂಗಸರಿಗಾಗಿ ಪ್ರತ್ಯೇಕ ಮಹಿಳಾ ಸೆಲ್‌ಗಳನ್ನು ಬಾಂಬೆ ಪೊಲೀಸರು ಸ್ಥಾಪಿಸಿದ್ದಾರೆ. ಆದರೆ ಇನ್ನೊಂದು ಕಡೆ ನಿರ್ಲಕ್ಷಿಸುವ, ಔದಾರ್ಯವಿಲ್ಲದಿರುವ, ಒಂದು ಬಗೆಯ ಕ್ರೌರ್ಯದ ನಡತೆಗಳು ನ್ಯಾಯಕ್ಕಾಗಿ ಹೋರಾಡುವ ಹೆಂಗಸರ ಬಗ್ಗೆ ತೋರಿಸಲ್ಪಡುತ್ತಿವೆ. ಮಹಿಳಾ ಚಳುವಳಿಯ ನಿರಂತರ ಪ್ರಯತ್ನದಿಂದಾಗಿ ಕೆಲವು ಬದಲಾವಣೆಗಳಾದರೂ ಅವು ಬಹಳ ಮಿತಿಯನ್ನೊಳಗೊಂಡಿವೆ.

ಪೊಲೀಸರಿಂದ ಮಾಡಲ್ಪಟ್ಟ ಕಾನೂನುಗಳಲ್ಲಿನ ಬದಲಾವಣೆಗಳು ಹೆಂಗಸರಿಗೆ ಸಹಾಯಕವಾಗುವ ಬದಲು ಮಹಿಳಾ ಗುಂಪುಗಳ ಶಕ್ತಿಯನ್ನು ವಿರೋಧಿಸುವಂತೆ ಹಾಗೂ ಒಪ್ಪಂದ ಮಾಡಿಕೊಳ್ಳುವಂತೆ ಕಾಣುತ್ತವೆ. ವೇದಿಕೆ ಇಂತಹ ಅನುಭವಗಳಿಂದ ಜರ್ಜರಿತವಾಗಿದೆ.

ಪೊಲೀಸ್ ಕಮಿಷನರ್‌ರವರು "ಹೆಲ್ಪ್" ಅನ್ನುವಂತಹ ಒಂದು ಶಾಖೆ ಪ್ರಾರಂಭಿಸಿದರು. ಇದರಲ್ಲಿ ಆರು ಮಹಿಳಾ ಗುಂಪುಗಳು ಪೊಲೀಸರಿಂದ ನಡೆಸಲ್ಪಟ್ಟ ನೊಂದ ಹೆಂಗಸರ ವಿಶೇಷ ಸೆಲ್‌ಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವು. ಇದರಲ್ಲಿ ವೈದ್ಯಕೀಯ ಸಾಮಾಜಿಕ ಕಾರ್ಯಕರ್ತರೂ ಸಹ ಭಾಗವಹಿಸಿದರು. ಆಸ್ಪತ್ರೆಯ ಸುಟ್ಟಗಾಯದ ವಾರ್ಡ್‌ನಲ್ಲಿ ಸುಟ್ಟ ಗಾಯಗಳಿಂದ ನರಳುವ ಹೆಂಗಸರ ಹೇಳಿಕೆಗಳನ್ನು ತೆಗೆದುಕೊಳ್ಳುವುದು ನಮ್ಮ ಕೆಲಸವಾಗಿತ್ತು. ಈ ರೀತಿಯ ಪ್ರಯೋಗ ರೀತಿಯ ಯೋಜನೆಯು ಒಂದು ಆಸ್ಪತ್ರೆಯಲ್ಲಿ ಪ್ರಾರಂಭವಾಗಿ ಅದರ ಪರಿಣಾಮವನ್ನು ನಿರ್ಧರಿಸಿ ನಂತರ ಇತರೇ ಆಸ್ಪತ್ರೆಗಳಲ್ಲಿ ಪ್ರಾರಂಭಿಸಬೇಕಿತ್ತು. ಈ ಯೋಜನೆಯ ಪ್ರಕಾರ ಇಪ್ಪತ್ನಾಲ್ಕು ಘಂಟೆಗಳೂ ಈ ಕೆಲಸಕ್ಕೆ ಸಿದ್ಧವಾಗಿರಬೇಕಿತ್ತು. ಆರು ಮಹಿಳಾ ಗುಂಪುಗಳು ಈ ಕೆಲಸವನ್ನು ಹಂಚಿಕೊಂಡು, ಒಂದೊಂದೇ ಕೆಲಸವನ್ನು ಹಂಚಿಕೊಂಡು ಸುಮಾರು ಆರು ತಿಂಗಳವರೆಗೆ ಮುಂದುವರೆಸಿದವು. ಪೊಲೀಸ್ ಜೊತೆಗೆ ಜೊತೆ ಕೂಡಿ ಕೆಲಸ ಮಾಡಬೇಕೆಂಬುದೇ ನಮ್ಮ ಪ್ರಯತ್ನವಾಗಿತ್ತು. ನಂತರ ಕೋರ್ಟ್ ಕೇಸ್‌ಗಳೇನಾದರೂ ಆದರೆ ನಾವು ಸ್ವತಂತ್ರವಾಗಿ ಸಾಕ್ಷಿ ಹೇಳಬಹುದೆಂದು ನಮಗೆ ಭರವಸೆ ಇತ್ತಿದ್ದರು. ಆದರೆ ಕೆಲವು ಕೇಸ್‌ಗಳನ್ನು ನಾವು ತೆಗೆದುಕೊಂಡ ತಕ್ಷಣ, ಪೊಲೀಸರ ದಾಖಲೆಗಳಲ್ಲಿರುವ ಮಿತಿಗಳನ್ನು ಸೂಚಿಸಿದ ತಕ್ಷಣ, ಅಥವಾ ನಮ್ಮನ್ನು ಸ್ವತಂತ್ರ್ಯ ಸಾಕ್ಷಿಗಾರರೆಂದು ತೆಗೆದುಕೊಳ್ಳುವುದೇ ಇರುವುದನ್ನು ಅವರಿಗೆ ತಿಳಿಯಪಡಿಸಿದ ತಕ್ಷಣ, ಅವರು ಆ ಯೋಜನೆಯನ್ನೇ ಮುಚ್ಚಿಬಿಟ್ಟರು. ಪೊಲೀಸ್ ಕಮಿಷನರ್‌ರವರು ಇದಕ್ಕೆ ಕೊಟ್ಟ ಕಾರಣವೇನೆಂದರೆ ಮಹಿಳಾ ಗುಂಪುಗಳ ಸೇರುವಿಕೆಯಿಂದಾಗಿ ಯಾವುದೇ ರೀತಿಯ ಪ್ರಭಾವ ಕಂಡು ಬರದಿರುವುದರಿಂದ ಈ ರೀತಿಯ ಪ್ರಯೋಗ ಕೊನೆಗೊಳಿಸುವುದೇ ಸೂಕ್ತವೆಂದು ಅಭಿಪ್ರಾಯಪಟ್ಟರು.

ಎಸ್‌ಪ್ಲನೇಡ್ ಕೋರ್ಟ್‌ನ ಮ್ಯಾಜಿಸ್ಟ್ರೇಟ್‌ರವರು ಸೂಳೆಗಾರಿಕೆ ತಡೆಯುವುದಕ್ಕೋಸ್ಕರ ಹಲವಾರು ಕಮಿಟಿಗಳನ್ನು ಪ್ರಾರಂಭಿಸಿದರು. ನಾವುಗಳೂ ಆ ಕಮಿಟಿಯಲ್ಲಿ ಸೇರಿಸಲ್ಪಟ್ಟಿದ್ದೆವು. ನಾವು ಹುಡುಗಿಯರ ಪೋಷಣೆಯನ್ನು ಗುರುತಿಸಿ, ಬಂಧಿಸಲು ಸಹಾಯಕರಾಗಬೇಕಿತ್ತು. ಆದರೆ ಯಾವ ಸ್ಥಿತಿಯಲ್ಲಿ ಈ ಹುಡುಗಿಯರು ಇಂತಹ ಉದ್ಯೋಗಕ್ಕೆ ಇಳಿದರು ಎಂಬುದನ್ನು ಮಾತ್ರ ನಾವು ಮಾತನಾಡಬಾರದಿತ್ತು. ನಾವು ಈ ಕಮಿಟಿಗಳಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿದೆವು.

ಈ ಎರಡೂ ಸಂದರ್ಭಗಳಲ್ಲಿ ನಾವು ರಾಜ್ಯದಿಂದ ಉಪಯೋಗಿಸಲ್ಪಟ್ಟೆವೆಂದು ನಮಗೆ ಅನ್ನಿಸಿತು. ನಮ್ಮ ಶಕ್ತಿಯೆಲ್ಲ ಇದರಲ್ಲಿ ಸುಮ್ಮನೇ ವ್ಯಯವಾಯಿತೆಂದು ನಮಗೆ ಅನ್ನಿಸಿತು. ಇದರಿಂದ ನಮಗಾಗಲೀ, ನೊಂದ ಹೆಂಗಸರಿಗಾಗಲೀ ಯಾವುದೇ ರೀತಿಯ ಫಲ ಸಿಕ್ಕಿತೆಂದು ನಮಗೆ ಅನ್ನಿಸಲಿಲ್ಲ. ಹೀಗೆ ರಾಜ್ಯದ ಅಂಗಗಳು ಹೆಂಗಸರ ಪರವಾಗಿ ತಾವಿರುವವೆಂಬುದನ್ನು ತೋರಿಸಿಕೊಳ್ಳಲು ಹೀಗೆ ಕೆಲವು ಯೋಜನೆ ರೂಪಿಸಿಕೊಂಡರು ಅಷ್ಟೇ!

ಸರ್ಕಾರದ ಯೋಜನೆಗಳು.:-


ಪೊಲೀಸ್ ಹಾಗೂ ನ್ಯಾಯಾಂಗದಲ್ಲಿನ ಪ್ರಯತ್ನಗಳಂತೆ ಸರ್ಕಾರದಿಂದಲೂ ಸಹ ಮಹಿಳೆಯರ ಪ್ರಶ್ನೆಗಳನ್ನುದ್ದೇಶಿಸಿ ಹಲವಾರು ಪ್ರಯತ್ನಗಳು ನಡೆದಿವೆ. ಇದರಲ್ಲಿ ಒಂದು ಯೋಜನೆಯೆಂದರೆ ಹೆಂಗಸರಿಗಾಗಿ ರೂಪಿತವಾದ ರಾಷ್ಟ್ರೀಯ ದೃಷ್ಟಿಕೋನದ ಯೋಜನೆ. ಈ ಯೋಜನೆ ಸಾಕಷ್ಟು ಆಶಯವನ್ನು ಹುಟ್ಟು ಹಾಕಿತ್ತು. ಆದರೆ ಅದಕ್ಕೆ ತಕ್ಕ ರೂಪವಾಗಿ ನಿರ್ದಿಷ್ಟ ಕಾರ್ಯಕ್ರಮಗಳೇನೂ ಹಾಕಿಕೊಂಡಿರಲಿಲ್ಲ. ಜೊತೆ_ಜೊತೆಯಾಗಿ ಕುಟುಂಬ ಯೋಜನಾ ಕಾರ್ಯಕ್ರಮಗಳು ಮತ್ತು ಹೆಂಗಸರಿಗೆಂದೇ ಕೆಲವು ಕುಟುಂಬ ಯೋಜನೆ ರೂಪಿಸಲಾಯಿತು. ಈ ಯೋಜನೆಗಳು ತೀರಾ ಅಪಾಯಕಾರಿಯಾಗಿದ್ದು, ಯಾವುದೇ ಮುನ್ನೆಚ್ಚರಿಕೆಯಿಲ್ಲದೆ ರೂಪಿಸಲಾಗಿತ್ತು. ರಾಜ್ಯ ಆ್ಯಮ್ನಿಯೋಸಿಂಥಿಸಿಸ್ ಪರೀಕ್ಷೆಯನ್ನು ನಿರ್ಬಂಧಿಸಿದೆ, ಆದರೆ ನೆಟ್ ರಿಪ್ರೊಡಕ್ಟೀವ್ ರೇಟ್–1 ಇದರ ಬಗ್ಗೆ ಯಾವ ಚಕಾರವನ್ನೂ ಎತ್ತಿಲ್ಲ. ಈ ಪ್ರಕಾರ ಪ್ರತಿಯೊಬ್ಬ ತಾಯಿಯೂ ಒಬ್ಬ ಮಗಳನ್ನು ಮಾತ್ರ ಹೊಂದಿರಬೇಕು. ಅಂದರೆ ರಾಜ್ಯ ಆಮ್ನಿಯೋ ಸಿಂಥೆಸಿಸ್ ಪರೀಕ್ಷೆಯ ನಿರ್ಬಂಧದ ಬಗ್ಗೆ ಎಷ್ಟು ಗಂಭೀರವಾಗಿದೆಯೋ ಎಂಬುದೇ ಪ್ರಶ್ನೆ. ಹೆಂಗಸರ ಬಗ್ಗೆ ಎಷ್ಟು ನಿರ್ಲಕ್ಷ್ಯ ಇದೆ ಎಂಬುದೂ ಇದರಿಂದ ವ್ಯಕ್ತವಾಗುತ್ತದೆ. ಹೆಂಗಸರ ಮೇಲಿನ ದೌರ್ಜನ್ಯಗಳು ತಡೆಯಿಲ್ಲದೇ ನಡೆಯುತ್ತಿವೆ. ಹೆಂಗಸರಿಗೆ ಕೆಲಸದ ಅವಕಾಶಗಳನ್ನು ಕಲ್ಪಿಸಿಕೊಡುವ ಬದಲು, ಅವರಿಗೆ ಪಾರ್ಟ್‌ಟೈಮ್ ಕೆಲಸ ಯೋಜಿಸತೊಡಗಿದೆ. ನಾವು ಮಹಿಳಾ ಗುಂಪುಗಳು, ಚಳವಳಿ ಇನ್ನೂ ಹಿಂದುಳಿದು ಬಂದುದಾಗಿರುವುದರಿಂದ ಯಾವುದೇ ರೀತಿಯ ನಿರ್ಧಾರಗಳಲ್ಲಿ ಪ್ರಭಾವ ಬೀರಲು ಸಾಧ್ಯವಾಗುತ್ತಿಲ್ಲ ಆದಾಗ್ಯೂ ನಾವು ಹೆಚ್ಚು–ಹೆಚ್ಚಾಗಿ ಬಲ ಪ್ರದರ್ಶನ ಮಾಡುತ್ತಿರುವುದರಿಂದ ನಮ್ಮನ್ನು ನಿರ್ಲಕ್ಷಿಸಲೂ ಸಹ ಅವರಿಂದ ಸಾಧ್ಯವಾಗುತ್ತಿಲ್ಲ. ಇಂದಿಗೂ ನಮ್ಮ ನಮ್ಮ ಹೋರಾಟ ಮುಂದುವರಿಸುತ್ತಲೇ ಇದ್ದೇವೆ. ಒಂದು ನಿರ್ದಿಷ್ಟ ವಿಧಾನವೆಂಬುದು ಇಲ್ಲ ಎಂಬುದೇ ನಮ್ಮ ತಿಳುವಳಿಕೆ. ಕೆಲವು ದಾರಿಗಳನ್ನು ಸೂಚಿಸಬಹುದೇ ಹೊರತು, ರಾಜ್ಯ ಎಂದರೆ ಇದೇ ಎಂದು ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಹೆಂಗಸರಿಗೆ ವಿಶೇಷ ಅಧಿಕಾರ ಕೊಡುವಲ್ಲಿ ರಾಜ್ಯಕ್ಕೆ ಎಷ್ಟು ಮಿತಿಗಳಿವೆ ಎಂಬುದು ನಮಗೆ ಅನುಭವಗಳಿಂದ ತಿಳಿದು ಬಂದಿದೆ. ನಾವು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ರಾಜ್ಯದ ಮೇಲೆ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ನಮ್ಮ ಸಮಸ್ಯೆಗಳಿಗೆ ಕೆಲವು ಉತ್ತರ ಕಂಡುಕೊಂಡು ಕೆಲವು ವಿಧಾನಗಳನ್ನು ಕಂಡುಕೊಳ್ಳುವುದಕ್ಕೆ ನಾವೇ ಪ್ರಯತ್ನ ಪಡಬೇಕು.

ನಮಗೆ ಹೆಚ್ಚು ಕ್ಯಾಂಪೇನ್‌ಗಳ ಅಗತ್ಯವಿದೆ. ನಮ್ಮ ಹುಟ್ಟು ಹೆಸರನ್ನು ಬದಲಾಯಿಸಿಕೊಳ್ಳದಿರುವಂತಹ ಹಾಗೂ ತಾಯಿಯನ್ನು ಸಹಜ ಪೋಷಕರು ಎಂದು ಗಣನೆಗೆ ತೆಗೆದುಕೊಳ್ಳುವಂತಹ ವಿಚಾರಗಳಿಗೂ ನಾವು ಹೋರಾಟ ನಡೆಸಬೇಕು.

ಈ ರೀತಿಯ ವಿಚಾರಗಳಿಂದ ನಾವು "ರಾಜ್ಯ" ದ ಅಂಗಗಳನ್ನು ರಾಜ್ಯವನ್ನು, ಪಿತೃಪ್ರಧಾನ ಮೌಲ್ಯಗಳಿಗೆ ಸವಾಲೆಸೆಯಬೇಕಾಗಿದೆ. ಈ ಮೂಲಕ ನಾವು ಗಂಡು ಹೆಣ್ಣಿನ ಮಧ್ಯ ಜಾತಿ, ವರ್ಗದ ಮಧ್ಯೆ ಸಮಾನತೆಯನ್ನು ಸಾಧಿಸುವತ್ತ ಹೆಜ್ಜೆ ಹಾಕಬಹುದಾಗಿದೆ.

ಇದರಿಂದ,

ಮೂವಿಂಗ್ ಬಟ್ ನಾಟ್
ಕ್ವೈಟ್ ದೇರ್.



ಸಂಸ್ಕಾರ.

ಅದೇನೋ ಕೆಲವು ಗಂಡಸರಿಗೇ
ಕತ್ತಲಾಗುವುದರೊಳಗೆ
ಬೆತ್ತಲಾಗುವ ಬಯಕೆ
ಹಸಿ ಮಾಂಸವ ಕಂಡ
ಹಸಿದ ಹದ್ದಿನಂತೆ
ದದ್ದ ಮಡಿಕೆಯು ಮಾಡಿ
ಗೆದ್ದವರಂತೆ ನಡೆದಾಡಿ
ಮಾಗಿಯಿತೆ ಅವರ ಪೌರುಷ

ಇವರ ಅಕ್ಕ-ತಂಗಿಯರು
ಪಡೆಯುವರೆ ಹರುಷ.......?
ಇವರ ಬಯಕೆಯಲ್ಲಿಯು
ಬತ್ತಳಿಕೆಯ ಬಾಣ ಕಳೆದುಕೊಂಡರೆ
ಸಿಗುವುದು ! ?

ಇನ್ನಾರೋ ಅಕ್ಕ-ತಂಗಿಯರು
ಭ್ರೂಣವಾಗಿ ಪಾಪದ ಪಿಂಡವಾಗಿ
ಬದುಕುವವರು ಬದುಕುತ್ತಾ
ಸಾಯುವವರು ಸಾಯುತ್ತಾ
ಮತ್ತೆ ಬೆಳಕು ಮೂಡುತ್ತದೆ
ಮತ್ತೆ ಅವರಂತವರ
ಬಯಕೆ ಬಯಸುತ್ತದೆ
ಬೆತ್ತಲಾಗುವ ಬಯಕೆ
ಬತ್ತಲಾರದು ಇವರ ಮನಕೆ
ನಿತ್ಯ ನಿರಂತರ ಬಲತ್ಕಾರ
ಕಲಿಯಲೊಲ್ಲರು ಸಂಸ್ಕಾರ

ಹೆರವು ದೇವೇಗೌಡ.

ಕಿತ್ತೂರಿನ ಹುಲಿ.

"ಬಾರೇ ನನ್ನ ಮುದ್ದಿನ ರಾಣಿ" ಚಿತ್ರದ ನಂತರ ಕನ್ನಡದಲ್ಲಿ ಸ್ತ್ರೀಯರ ಪರವಾಗಿ ಧ್ವನಿ ಎತ್ತಿ ಬಂದ ಚಿತ್ರವೆಂದರೆ "ಕಿತ್ತೂರಿನ ಹುಲಿ" ಕಿತ್ತೂರು ಚೆನ್ನಮ್ಮನ ಚಿಹ್ನೆಯಾಗಿಟ್ಟುಕೊಂಡ ಈ ಸಿನಿಮಾ ನಾಯಕಿಯನ್ನು ಕಿತ್ತೂರು ಚೆನ್ನಮ್ಮನನಂತೆ ಆಧುನಿಕ ಗೋಜಲು ಬದುಕಿನಲ್ಲಿ ಚಿತ್ರಿಸಲಾಗಿದೆ, ಈಕೆ ಕಿತ್ತೂರು ಚೆನ್ನಮ್ಮನಂತೆ ಅನ್ಯಾಯಕ್ಕೆ ಸಿಡಿದೇಳುವ ವೇಳೆ. ಹೆಂಗಸರಿಗಾಗಲೀ ಅಥವಾ ತನ್ನೆದುರಿಗೇ ಇನ್ಯಾರಿಗಾದರೂ ಅನ್ಯಾಯವಾದರೆ ಸಹಿಸುವವಳಲ್ಲ ಕಾಲೇಜಿನಲ್ಲಿಯೂ ರೌಡಿ | ಪುಂಡ ಹುಡುಗರನು ಕಂಡರೆ ಆಗದವಳು.

ಹೀಗೆ ಕಾಲೇಜಿನಿಂದ ಈಕೆ ಗೆಳತಿಯರೊಡನೆ ಬರುವಾಗ ಹತ್ತಿರದ ಪೊಲೀಸ್ ಠಾಣೆಯಿಂದ ಹೆಂಗಸೋರ್ವಳ ಕಿರುಚುವಿಕೆಯನ್ನು ಕೇಳಿ ಅಲ್ಲಿಗೆ ಧಾವಿಸುತ್ತಾಳೆ. ಅನ್ಯಾಯವಾಗಿ ತನ್ನ ಗಂಡನನ್ನು ಏಕೆ ಬಂಧಿಸಿದಿರೆಂದು ಕೇಳಲು ಹೋದ ಹೆಂಗಸಿನ ಮಾನಭಂಗಕ್ಕಾಗಿ ಪ್ರಯತ್ನ ಪಡುವ ಸಬ್ ಇನ್ಸ್‌ಪೆಕ್ಟರ್‌ಗೆ ಛೀಮಾರಿ ಮಾಡಿದ ನಾಯಕಿ ಆತ ಬರಿಯ ನಿಕ್ಕರ್ ಧರಿಸಿ ಕಮಿಷನರ್ ಆಫೀಸ್ ತನಕ ಬರಬೇಕೆಂದು ಒತ್ತಾಯಿಸಿ ಹಾಗೆಯೇ ಘೋಷಣೆಗಳ ಮೂಲಕ ಹೋಗುತ್ತಾರೆ. ಹೀಗೆ ನಾಯಕಿ ತಾನು ಕಿತ್ತೂರಿನ ಚೆನ್ನಮ್ಮನ ಆಧುನಿಕ ಪ್ರತಿನಿಧಿ ಎಂಬುದನ್ನ ಕಾಲೇಜಿನ ಹಂತದಲ್ಲಿಯೇ ತೋರಿಸುತ್ತಾಳೆ.

ಪುಂಡ | ಪೋಕರಿಗಳ ಜೊತೆ ಅಲೆಯುವ ನಾಯಕ ಒಂದು ಅಪಘಾತ ಮಾಡಿ ಲಂಚವಿತ್ತು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಈಕೆ ಆತನ ಮಾನವೀಯತೆಯ ಕೆದರಿ ಆತನಲ್ಲಿ ಅವನ ಮನುಷ್ಯತ್ವದ ಇರುವನ್ನು ಪರಿಚಯಿಸುತ್ತಾಳೆ, ಅಲ್ಲಿಂದ ಆತನನ್ನು ಮದುವೆಯಾಗುವ ಈಕೆ ತನ್ನ ವೈವಾಹಿಕ ಜೀವನದ ನಂತರ ಕಿತ್ತೂರು ಚೆನ್ನಮ್ಮನ ಛಲವನ್ನೇ ಮುಂದುವರಿಸಿಕೊಂಡು ಹೋಗುತ್ತಾಳೆ,

ತಂದೆಗೆ ಮಗುವಿಲ್ಲ ಎಂಬ ಕೊರಗನ್ನು ಹಲವಾರು ಬಾರಿ ಅಡಿಕೊಂಡು ನಗುವ ಈಕೆ ತಾನು ತನ್ನ ತಂದೆಗೆ ಮಗನಂತೆಯೇ ಎಂದು ಹೇಳುತ್ತಾಳೆ, ಆಕೆಯ ಮದುವೆಯಿಂದ ನಿರಾಶರಾದ ತಂದೆಯ ಪಾರ್ಟನರನ ಮೋಸದಿಂದ ತಂದೆ ಮರಣವಪ್ಪಿದಾಗ ಆತನ ಶವಕ್ಕೆ ಬೆಂಕಿಯಿಡಲು ತನಗೇ ಅಧಿಕಾರವಿದೆ. ಎಂದು ಹೇಳುವ ಈಕೆ ಗಂಡು ಮಕ್ಕಳೇ ಶವಕ್ಕೆ ಬೆಂಕಿ ಇಕ್ಕಬೇಕೆಂಬ ಸಂಪ್ರದಾಯವನ್ನು ಪ್ರಶ್ನಿಸುತ್ತಾಳೆ

ಈಕೆಗೆ, ಈಕೆಯ ಗಂಡನಿಗೆ ವಿರೋಧವಾಗಿರುವ ಈಕೆಯ ಮಾವ, ಹಾಗೂ ಇತರರ ಹಂಚಿಕೆಯಿಂದ ಈಕೆಯ ಅತ್ಯಾಚಾರವಾದಾಗ ಮಾಮೂಲಿ ಎಲ್ಲ ಸಿನಿಮಾಗಳಂತೆಯೇ ಈಕೆಯೂ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ, ಇಷ್ಟು ದಿನ ತಾನು ಗಂಡು ಹುಡುಗನಂತೆಯೇ ಎಂದು ತಿಳಿದದ್ದು ತಪ್ಪಾಯಿತು. ಈಗ ತನಗೆ ತನ್ನ ಹೆಣ್ತನದ ಅರಿವಾಗಿದೆ, ಎನ್ನುತ್ತಾಳೆ. ಆದರೆ ನಾಯಕ ಆಕೆಯನ್ನು ಸಮಾಧಾನಿಸುತ್ತಾನೆ. ಯಾರದೋ ಸಂಚಿಗೆ ಬಲಿಯಾಗಿರುವ ಆ ಘಟನೆ ಒಂದು ಅಪಘಾತ, ದುರ್ಘಟನೆ ಎನ್ನುತ್ತಾನೆ, ಅದನ್ನು ಮರೆತು ತಾವಿಬ್ಬರೂ ಬಾಳಬೇಕು ಎನ್ನುತ್ತಾನೆ.

ಕೊನೆಯಲ್ಲಿ ಚಿತ್ರದ ಕೊನೆಗೆ ತನ್ನ ಮೇಲೆ ಅತ್ಯಾಚಾರ ಎಸಗಿದವರ ಮೇಲೆ ನಾಯಕಿ ಸೇಡು ತೀರಿಸಿಕೊಳ್ಳಲು ಹವಣಿಸುತ್ತಾಳೆ. ಮಂತ್ರಿಯಾಗಿ ಬರುವ ಆತ ಕಿತ್ತೂರು ಚೆನ್ನಮ್ಮನ ವಿಗ್ರಹವನ್ನು ಪ್ರತಿಸ್ಥಾಪನೆಗೊಳಿಸಿರಬೇಕಾಗಿರುತ್ತದೆ. ಈಗ ನಾಯಕನೂ ಸಹ ಆತನನ್ನು ಕೊಲ್ಲಲು ಹೊಂಚಿಕೆ ಹಾಕಿ ಸಿದ್ಧವಾಗಿ ಬರುತ್ತಾನೆ, ಪರದೆಯೆಳೆದ ವಿಗ್ರಹದ ಹಿಂದೆ ನಾಯಕಿ ಕುಳಿತುಕೊಂಡು ಉದ್ಘಾಟನೆಗೆಂದು ಬಂದ ಆ ಮಂತ್ರಿಯನ್ನು ಅಟ್ಟಿಸಿಕೊಂಡು ಹೋಗುತ್ತಾಳೆ, ಇನ್ನೊಂದು ಕಡೆಯಿಂದ ನಾಯಕನೂ ಅಟ್ಟಿಸಿಕೊಂಡು ಬರುತ್ತಾನೆ, ಆವರನ್ನು ಕೊಲ್ಲುವುದರ ಜೊತೆಗೆ ನಾಯಕ | ನಾಯಕಿ ಇಬ್ಬರೂ ಗುಂಡಿಗೆ ಬಲಿಯಾಗುತ್ತಾರೆ, ಕೊನೆಯ ದೃಶ್ಯವನ್ನು ಸಾಂಕೇತಿಕವಾಗಿ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ

ರಾಯಣ್ಣನ ದೃಶ್ಯ ನೆನಪಿಗೆ ತರುವಂತೆ ಮಾಡಲಾಗಿದೆ.

ಹೀಗೆ ಪೊಲೀಸ್ ಠಾಣೆಯಲ್ಲಿ ಹೆಂಗಸರಿಗೆ ನಡೆಯುವ ದೌರ್ಜನ್ಯದ ಬಗ್ಗೆ, ಅತ್ಯಾಚಾರದ ಬಗ್ಗೆ ಇಂತಹ ಮಹಿಳೆಯರ ಸಮಸ್ಯೆಗಳ ಬಗ್ಗೆ ಈ ಸಿನೆಮಾ ಪ್ರಗತಿಪರವಾದ ನಿಲುವುಗಳನ್ನು ತೋರಿದೆ. ವ್ಯಾಪಾರಿ ಚಿತ್ರಗಳು ಸಂಸ್ಕೃತಿಯ ನಿರ್ಮಾಣದ ಪಾತ್ರದಲ್ಲಿ ಬಲವತ್ತರವಾದ ಪಾತ್ರ ವಹಿಸುತ್ತಿರುವುದರಿಂದ, ವ್ಯಾಪಾರಿ ಚಿತ್ರಗಳು ಸ್ತ್ರೀಯರ ಬಗ್ಗೆ ಸ್ಪಷ್ಟಾತ್ಮಕ ನಿಲುವುಗಳ ತೆಗೆದುಕೊಳ್ಳುವುದರಿಂದ ಇಂತಹ ಚಿತ್ರಗಳು ಸ್ವಾಗತಾರ್ಹವಾಗಿವೆ.

ಕಲಾವತಿ.

ಬೆಳಕಿನತ್ತ.

ಕೆಲವು ವರ್ಷಗಳ ಹಿಂದೆ ನಮ್ಮ ಮನೆಯ ಪಕ್ಕದಲ್ಲಿ ತಮಿಳು ಕುಟುಂಬವೊಂದು ವಾಸವಾಗಿತ್ತು. ಆ ಮನೆಯ ಹೆಂಗಸು ರಾಧಿಕಾಳೊಡನೆ ನನ್ನ ಗೆಳೆತನವಾಯಿತು. ಅವಳು ಅಪ್ಪಟ ಗೃಹಿಣಿ, ಸಂಪ್ರದಾಯಸ್ಥೆ ಆದರೆ ವಿದ್ಯಾವಂತೆ, ಬಹಳ ಬುದ್ಧಿವಂತಳು ನಾನು ಯಾವಾಗಲೂ ಅವರ ಮನೆಗೆ ಹೋಗುತ್ತಿದ್ದೆ. ಹೀಗೊಂದು ದಿನ ಅವರ ಮನೆಗೆ ಹೋದಾಗ ಟಿ.ವಿಯಲ್ಲಿ ಯಾವುದೋ ಹಿಂದಿ ಚಿತ್ರ ಮೂಡಿ ಬರುತ್ತಿತ್ತು. ನಾವು ಮಾತನಾಡುತ್ತ ಚಿತ್ರವನ್ನು ವೀಕ್ಷಿಸುತ್ತ ಕುಳಿತೆವು. ಅದರ ಕತೆ ಹೀಗಿತ್ತು. ಅದರಲ್ಲಿ ಒಬ್ಬಳು ಶ್ರೀಮಂತ ಮಹಿಳೆಗೆ ಮಕ್ಕಳಿರುವುದಿಲ್ಲ. ಅವಳ ಗಂಡ ಸದಾ ವ್ಯಾಪಾರ ವ್ಯವಹಾರದಲ್ಲೇ ಮುಳುಗಿರುತ್ತಾನೆ. ಅಗಾಧ ಶ್ರೀಮಂತಿಕೆ ಇದ್ದುದರಿಂದ ಆ ಮಹಿಳೆಗೆ ಮಾಡಲು ಕೆಲಸವೂ ಇರುವುದಿಲ್ಲ. ಅದರಿಂದ ಅವಳು ಬಹಳಷ್ಟು ಒಂಟಿತನವನ್ನು ಅನುಭವಿಸುತ್ತಿರುತ್ತಾಳೆ. ಅದರಿಂದ ಪಾರಾಗಲು ಅವಳು ಕುಡಿತವನ್ನು ಅವಲಂಬಿಸುತ್ತಾಳೆ. ಕೊನೆಗೆ ಅದರಲ್ಲೇ ಮುಳುಗಿ ದುರಂತಕ್ಕೀಡಾಗುತ್ತಾಳೆ.

ಈ ಚಿತ್ರದ ಅಂತ್ಯ ರಾಧಿಕಾಗೆ ಹಿಡಿಸಲಿಲ್ಲ. ಆದರೆ ನಾನು ಬೇಕೆಂದೇ ಆ ಒಂಟಿಯಾದ ಶ್ರೀಮಂತ ಮಹಿಳೆಯ ಬಗೆಗೆ ಸಹಾನುಭೂತಿ ವ್ಯಕ್ತಪಡಿಸುತ್ತ "ಗಂಡನ ಸ್ನೇಹವಿಲ್ಲದ, ಮಕ್ಕಳ ಪ್ರೀತಿಯಿಲ್ಲದ ಆ ಮಹಿಳೆ ಬೇರೇನು ಮಾಡಬಹುದಿತ್ತು? ಎಂದೆ. ರಾಧಿಕಾ ಸಿಟ್ಟಿಗೆದ್ದರು." ಗಂಡ ಮಕ್ಕಳು ಇಷ್ಟೇ ಬದುಕೆಂದರೆ ಇಲ್ಲ ಉಜ್ವಲಾ ಬದುಕು ಅಮೂಲ್ಯವಾದುದು ತಪ್ಪು ದಾರಿಯಲ್ಲಿ ನಡೆದು ಅದನ್ನು ಕಳೆದುಕೊಂಡರೆ ಅದು ಮತ್ತೆ ಸಿಗದು. ಆ ಶ್ರೀಮಂತ ಮಹಿಳೆ ತನಗಿಂತ ಹೆಚ್ಚು ದುಃಖಿಗಳನ್ನು, ಹೊಟ್ಟೆಗೆ ಬಟ್ಟೆಗೆ ಗತಿಯಿಲ್ಲದವರನ್ನು ನೋಡಬೇಕಿತ್ತು. ಒಂಟಿತನ ತೊಲಗಿಸಲು ಅನಾಥಾಶ್ರಮಕ್ಕೆ ಭೇಟಿ ಕೊಡಬಹುದಿತ್ತು. ಅಲ್ಲಿಯ ಮಕ್ಕಳೊಡನೆ ಸ್ನೇಹ ಬೆಳೆಸಬಹುದಿತ್ತು. ಅಂಧ ಮಕ್ಕಳಿಗಾಗಿ, ಬುದ್ಧಿ ಮಾಂದ್ಯ ಮಕ್ಕಳಿಗಾಗಿ ಏನನ್ನಾದರೂ ಮಾಡಬಹುದಿತ್ತು. ವಿವಿಧ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದುಕೊಂಡು ಅವುಗಳ ಚಟುವಟಿಕೆಗಳಲ್ಲಿ ಭಾಗವಹಿಸಬಹುದಿತ್ತು. ಅಲ್ಲದೇ ಆರೋಗ್ಯಕರ ಹವ್ಯಾಸಗಳಾದ ಓದುವುದು, ಬರೆಯುವುದು, ಚಿತ್ರಬಿಡಿಸುವುದು ಮುಂತಾದುವುಗಳಲ್ಲಿ ತೊಡಗಬಹುದಿತ್ತ ಎಂದಿದ್ದರು. ಎಷ್ಟೋ ಮಹಿಳೆಯರು ಮದುವೆಯಾಗಲಿಲ್ಲವೆಂದೋ ಮಕ್ಕಳಾಗಲಿಲ್ಲವೆಂದೋ ಜೀವನದಲ್ಲಿ ನಿರಾಶರಾಗಿಬಿಡುತ್ತಾರೆ. ಕ್ಷುಲ್ಲಕ ಕಾರಣಕ್ಕಾಗಿ ಜೀವನೋತ್ಸಾಹವನ್ನು ಕಳೆದುಕೊಂಡುಬಿಡುತ್ತಾರೆ, ತಾವೇ ಕೀಳರಿಮೆ ಬೆಳೆಸಿಕೊಂಡು ಅದೇ ಭ್ರಮೆಯಲ್ಲಿ ಸಿಲುಕಿ ಒದ್ದಾಡುತ್ತಾರೆ. ನಮ್ಮಲ್ಲಿ ಇಲ್ಲದ್ದಕ್ಕಾಗಿ ಇಲ್ಲೆಂದು ಕೊರಗುವುದಕ್ಕಿಂತ ಇದ್ದದನ್ನು ಬಳಸಿಕೊಂಡು, ಬೆಳೆಸಿಕೊಂಡು ಜೀವನವನ್ನು ಸಫಲವಾಗಿಸಿಕೊಳ್ಳಬೇಕಲ್ಲವೇ? ಬದುಕಿನ ಸಫಲತೆ ನೀವು ಸಮಾಜಕ್ಕೆ ಏನನ್ನು ಕೊಟ್ಟಿರುವಿರಿ ಎಂಬುದನ್ನು ಅವಲಂಬಿಸಿರುತ್ತದೆ. ಸಮಾಜಕ್ಕೆ ನಮ್ಮ ಅವಶ್ಯಕತೆ ಇದ್ದೇ ಇರುತ್ತದೆ, ನೂರಾರು ಜನರು ಪ್ರೀತಿ ವಿಶ್ವಾಸದ ಕೊರತೆಯಿಂದ ಬಳಲುತ್ತಿರುತ್ತಾರೆ. ಅಂಥವರಿಗಾಗಿ ನಮ್ಮ ಪ್ರೀತಿ ಸೇವೆಯನ್ನು ಧಾರೆಯೆರೆಯಬಹುದು. ನಾವು ಯಾವಾಗಲೂ ಬೆಳಕಿನತ್ತ ನೋಡಬೇಕು ಆಂದರೇನೇ ನಮಗೆ ದಾರಿ ಸಿಗುವುದು. ಕತ್ತಲಿನತ್ತ ನೋಡುತ್ತ ಕುಳಿತರೆ ಅಲ್ಲೇ ಕೊಳೆಯಬೇಕಾಗುತ್ತದೆ.

ಉಜ್ವಲಾ ಪುಣಜಗೌಡ.

ಒಂದು ಮೊಂಡು ಸಂಭಾಷಣೆ.

ರುಚಿಯಾಗಿರದ ಊಟವನ್ನು ಮಾಡುತ್ತಾ, "ಅಡಿಗೆ ಯಾರು ಮಾಡಿದ್ದಪ್ಪ." ಎಂದಾಗ ಆತ "ನಮ್ಮ ಮನೆಯವರು ಊರಲ್ಲಿ ಇಲ್ಲ ನಾನ ಮಾಡ್ದೆ. ಅದಕ್ಕೆ ಹಾಗೆ ಇರೋದು. ಹೆಂಗಸರ ಕೈ ಅಡಿಗೆನೇ ರುಚಿ ಅಂದರು. ಅವರ ಜೊತೆಯಲ್ಲಿ ಊಟ ಮಾಡುತ್ತಿದ್ದ ಇನ್ನೊಬ್ಬರು "ಹೆಂಗಸರ ಕೆಲ್ಸಾ ಅದೇ ತಾನೆ." ಅಂದರೆ ಅವರ ಜೊತೆಯಲ್ಲಿ ಊಟಮಾಡುತ್ತಿದ್ದ ಆಕೆ ಅಡ್ಡೀಗೆ ಆಗುತ್ತೆ. ಹೆಂಗಸರು ಅನಿವಾರ್ಯವಾಗಿ ಈ ಕೆಲ್ಸಾ ಮಾಡಬೇಕಾಗಿದೆ. ಆದರೆ ಅಡಿಗೆ ಕೆಲ್ಸಾ ಹೆಂಗಸರೇ ಮಾಡ್ಬೇಕು ಅಂತ ಇಲ್ಲ ಯಾರು ಬೇಕಾದ್ರು ಮಾಡಬಹುದು. ಆದರೆ ಈ ಸಮಾಜ ಹೆಂಗಸರೇ ಆ ಕೆಲ್ಸಾ ಮಾಡಬೇಕು ಅನ್ನೋ ವಾತಾವರಣ ಉಂಟು ಮಾಡಿದೆ. ಎಂದಾಗ ಉಳಿದ ಇತರ ಗಂಡಸರು ಅವರ ವಾದಗಳಿಗೆ ಅವಳ ಮೇಲೆ ಮುಗಿಬಿದ್ದರು. "ಹೆಂಗಸರ ಪ್ರಮುಖವಾದ ವೃತ್ತಿ ಅಡಿಗೆ ಮಾಡುವುದು. ಬೇರೆ ಏನಾದ್ರು ಕೆಲ್ಸಾನ ಅವರು ಮಾಡುತ್ತಿರಬಹುದು. ಆದ್ರೆ ಅವರ ಪ್ರಮುಖ ಕೆಲಸ ಅಡಿಗೆ ಮಾಡುವುದು. ಇಂದಿರಾ ಗಾಂಧಿ ನಮ್ಮ ದೇಶದ ಪ್ರಧಾನ ಮಂತ್ರಿಯಾಗಿದ್ದರೂ ಅವಳು ಅಡಿಗೆ ಮಾಡುತ್ತಿದ್ದಳು. ಅವಳು ಮಾಡುವ ಅಡಿಗೆಯನ್ನು ಅವಳ ಮಕ್ಕಳು ತುಂಬಾ ಮೆಚ್ಚಿಕೊಳ್ಳುತ್ತಿದ್ದರು. ಆದ್ರೆ ಅದೇ ರಾಜೀವಗಾಂಧಿ ಅಡಿಗೆ ಮಾಡಿದ ವಿಚಾರ ಏನಾದ್ರು ನೀವು ಕೇಳಿದ್ರಾ. ಗಂಡಸರು ಕೆಲವು ಕೆಲ್ಸಾ ಮಾಡಬಲ್ಲರು. ಅವರು ಧೃಡವಾಗಿದ್ದಾರೆ, ಆದರೆ ಹೆಂಗಸರು ಕೆಲವು ಕೆಲ್ಸಾ ಮಾಡಬಹುದು. ಎಲ್ಲಾ ಕೆಲ್ಸಾನೂ ಅವರಿಗೆ ಮಾಡಲು ಸಾಧ್ಯವಿಲ್ಲ." ಅವರ ಜೊತೆಗೆ ಊಟಕ್ಕೆ ಕುಳಿತ ಹೆಂಗಸು, ಹೇಳಿದಳು, ಇಲ್ಲ ಅದೆಲ್ಲ ನಿಮ್ಮ ಕಲ್ಪನೆ ಅಷ್ಟೆ. ವಾಸ್ತವಿಕವಾಗಿ ನೀವು ಕಣ್ಣು ತೆರೆದು ನೋಡಿದ್ರೆ ಗೊತ್ತಾಗುತ್ತೆ. ಹೆಂಗಸು ಅಷ್ಟೆ ಧೃಡವಾಗಿರುವ ಕೆಲಸಗಳನ್ನು ನಿರ್ವಹಿಸುತ್ತಾಳೆ........

ಮತ್ತೆ ಮೂರು ಜನ ಸೇರಿ ಅವಳ ಬಾಯಿ ಮುಚ್ಚಿಸುವ ಪ್ರಯತ್ನ ಮಾಡಿದರು. ಆದರೂ ಅವಳು ಅವರ ಎತ್ತರಿಸಿದ ಧ್ವನಿಯ ನಡುವೆ, ಹೆಂಗಸರು ಅಂದರೆ ಹೀಗಿರಬೇಕೆಂದು ಈ ಸಮಾಜದಲ್ಲಿ ಮೌಲ್ಯಗಳನ್ನು ಸೃಷ್ಟಿಸಲಾಗಿದೆ, ಎಂದೆನ್ನುತ್ತಿದ್ದಂತೆ ಯಾರು ಆ ಮೌಲ್ಯಗಳನ್ನು ಸೃಷ್ಟಿಸಿದವರು....ಮರು ಪ್ರಶ್ನೆ ಎಸೆದರು, ಪುರುಷರು ಅಂದಳು ಆಕೆ, ಅವಳಿಗೂ ಅವಕಾಶವಿದ್ದರೆ ಆಯ್ಕೆಯ ಸ್ವಾತಂತ್ರ್ಯ ವಿದ್ದರೆ........ಎನ್ನುತ್ತಿದ್ದಂತೆ.

"ಮೌಲ್ಯಗಳು ಸೃಷ್ಟಿಯಾಗಿದ್ದರೆ ಅದಕ್ಕೆ ಬೇಕಾದಷ್ಟು ಒಳ್ಳೆಯ ಕಾರಣಗಳೇ ಇರುತ್ತವೆ. ಮಕ್ಕಳನ್ನು ಪಾಲನೆ, ಪೋಷಣೆ, ಕೊಡೋದಕ್ಕೆ ತಾಯಿ ಮನೆಯಲ್ಲಿ ಇರಬೇಕು. ಎಷ್ಟೋ ಮಕ್ಕಳು ಇದರಿಂದಲೇ ಹಾಳಾಗುತ್ತವೆ. ತಾಯಿ ಪ್ರೀತಿ ತುಂಬಾ ಮುಖ್ಯ ಅದಕ್ಕೆ ಇವತ್ತು ಮಕ್ಕಳು ದಾರಿ ತಪ್ಪುತ್ತಿರುವುದು" ಇನ್ನೊಬ್ಬರು ತಮ್ಮ ವಾದವನ್ನು ಮುಂದಿಡುತ್ತಾ, ತಮ್ಮ ಈ ವಾದಕ್ಕೆ ಪ್ರತಿವಾದ ಇರಲೂ ಸಾಧ್ಯವೇ ಇಲ್ಲವೆಂಬಂತೆ ಬೀಗಿದರು.

ಹೆಂಗಸರು ಮನೆಯಲ್ಲಿ ಇರಬೇಕೆಂಬುದಕ್ಕೆ ಕಾರಣವಿದೆ. ಗಂಡಸರಲ್ಲಿ ಇಲ್ಲದ ಆಕರ್ಷಣೆ ಹೆಂಗಸರಲ್ಲಿ ಇರುತ್ತವೆ. ಆಕರ್ಷಣೆಯಿಂದ ಹೆಂಗಸರಿಗೆ ತೊಂದರೆಯಾಗುತ್ತೆ. ಆ ಕಾರಣದಿಂದ ಎಂದು ಒಬ್ಬರು ಅನ್ನುತ್ತಿದ್ದಂತೆ, ಇನ್ನೊಬ್ಬರು ಅವರು ಸೇಫ್ ಆಗಿ ಇರ್ಲಿ ಅಂತ ಹೆಂಗಸರು ಮನೆಯಲ್ಲಿ ಇರಲಿ ಅಂತ ಗಂಡಸರು ಅಪೇಕ್ಷೆ ಪಟ್ಟರು ಎಂದರು. ಆಕೆಗೆ ಕೋಪ ಉಕ್ಕಿ ಬಂತು. ಟಿ. ವಿ. ಸಿನಿಮಾ, ಪತ್ರಿಕೆ, ಪ್ರತಿಭಟನೆ.... ಇವುಗಳಲ್ಲೊಂದರ ಒಂದಂಶದ ಪ್ರಭಾವವೂ ಇವರ ಮೇಲೆ ಬೀರಿಲ್ಲವೇ.... ವಾದ ಮಾಡುವುದರ ವಿಫಲತೆಯನ್ನು ಅರಿತ ಆಕೆಯನ್ನು ಕಾಡಿದ್ದು, ನಾಲ್ಕಂಕಿಯ ಸಂಬಳ ತೆಗೆದುಕೊಳ್ಳುವ, ವಿದ್ಯಾವಂತರಾದ ಇಂತವರನ್ನೆ ಒಪ್ಪಿಸುವುದು ಇಷ್ಟು ಕಷ್ಟವಾದರೆ ಇನ್ನು ನಿರಕ್ಷರಸ್ಥರೊಂದಿಗೆ ಹೇಗೆ ಸಂವಾದಿಸುವುದು? ಅಥವಾ ಅವರೊಂದಿಗೆ ಸಂವಾದಿಸುವುದು ಸುಲಭದ ಸಂಗತಿಯು?, ಅಥವಾ ಗಂಡಸರು ತಮಗೆ ಕೌಟುಂಬಿಕ ಚೌಕಟ್ಟಿನಲ್ಲಿ ಸಿಗುವ ಸವಲತ್ತು ಬಿಡಬೇಕಾಗಬಹುದೆಂದು ಮಾಡುವ ಮೊಂಡು ವಾದಗಳೇ?

ಆಶಾ.

ಹೆಣ್ಣಿಗೇಕೆ ವಿಧವೆ ಪಟ್ಟ?

—ಒಂದು ಅನಿಸಿಕೆ.

ಈ "ವಿಧವೆ" ಎಂಬ ಪಟ್ಟವನ್ನು ಹಿಂದೆ ಯಾವ ಮಹಾತ್ಮ ನಿರ್ಮಿಸಿದನೋ ತಿಳಿಯದು. ಅದರಲ್ಲಿಯೂ ಹೆಣ್ಣೊಬ್ಬಳಿಗೇ ಈ ಹುದ್ದೆಯನ್ನು ಮೀಸಲಾಗಿಟ್ಟಿದ್ದಾರೆ. ಈ ಪಟ್ಟವನ್ನು ಹೆಣ್ಣೊಬ್ಬಳಿಗೇ ಏಕೆ ಮಾಡಿದರು? ಗಂಡಿನಂತೆಯೇ ಹೆಣ್ಣಿಗೂ ಪುನರ್ವಿವಾಹವಾಗಲು ಹಕ್ಕಿಲ್ಲವೆ? ಕತ್ತಲದ ಜೀವನಕ್ಕೆ ಮತ್ತೆ ಬೆಳಕು ತುಂಬಲು ಅವಳಿಗೆ ಅವಕಾಶವಿಲ್ಲವೆ? ಹೆಂಡತಿ ಸತ್ತರೆ ಗಂಡ ಮತ್ತೆ ಎಷ್ಟು ಬೇಕಾದರೂ ಮದುವೆ ಮಾಡಿಕೊಳ್ಳಬಹುದು. ಆದರೆ ಅದೇ ಹೆಣ್ಣು ಮದುವೆಯಾದರೆ ಅವಳಿಗೆ ಸಮಾಜದಲ್ಲಿ ಸ್ವಲ್ಪವೂ ಬೆಲೆಯೇ ಇಲ್ಲ ಯಾಕೆ?

ಈ ಎಲ್ಲಾ ಮೂಢ ನಂಬಿಕೆಗಳನ್ನು ಹಾಗೂ ಹಳೆಯ ಸಂಪ್ರದಾಯಗಳನ್ನು ಮುರಿಯುವ ಹಾಗೂ ಗಂಡನಿಲ್ಲದಿದ್ದರೂ ಪುನರ್ಜೀವನ ಆರಂಭಿಸುವ ಎದೆಗಾರಿಕೆ ಹಾಗೂ ಧೈರ್ಯ ಒಂದು ಜೀವಿಗೆ ಮಾತ್ರ ಸಾಧ್ಯ. ಅದುವೇ ಹೆಣ್ಣು. ಹಿಂದಿನ ಸಂಪ್ರದಾಯಗಳಿಗೂ ಇಂದಿನ ಸಂಪ್ರದಾಯಗಳಿಗೂ ಹೋಲಿಸಿ ನೋಡಿದರೆ ಹೆಣ್ಣು ಮೂಢ ನಂಬಿಕೆಗಳ ಸಂಪ್ರದಾಯಗಳನ್ನು ಬದಿಗೊತ್ತಿ ಹೊಸ ದಿಕ್ಕಿನತ್ತ ಸಾಗುತ್ತಿದ್ದಾಳೆ ಆದರೆ? ಆದರೆ ಇದು ಬರೀ ಪಟ್ಟಣಗಳಲ್ಲಿ ಮಾತ್ರ. ಗ್ರಾಮೀಣ ಪ್ರದೇಶಗಳಲ್ಲಿ ವಿಧವೆಯರು ಸಮಾಜದ ಸಂಪ್ರದಾಯಗಳಿಗೆ ಸಿಲಿಕಿ ಪಡಬಾರದ ಕಷ್ಟಗಳನ್ನು ಅನುಭವಿಸುತ್ತ ಜೀವಂತವಾಗಿ ಸಮಾಧಿ ಪಾಲಾಗುತ್ತಿದ್ದಾರೆ. ಹಿಂದಿನವರು ಹಾಕಿದ ಸಂಪ್ರದಾಯದ ಗಡಿಗಳನು ಧಾಟುವಂತಿಲ್ಲ. ದಾಟಿದರೆ ಅವರಿಗೆ ಸಮಾಜದಲ್ಲಿ ಕೀಳು ಭಾವನೆಯಿಂದ ಕಾಣಲಾಗುವುದು ಅವಳ ಬಗ್ಗೆ ಚುಚ್ಚುನುಡಿಗಳನ್ನಾಡುವುದು. ಹಾಗೂ ಯಾವುದೇ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ.

ಸಂಪೂರ್ಣ ಹಕ್ಕು ಯಾರಿಗುಂಟು ಯಾರಿಗಿಲ್ಲ?

ಗಂಡು ಜಾತಿಯಲ್ಲಿ ಎಲ್ಲಾ ವಿಧದಲ್ಲಿಯೂ ಎಲ್ಲರಿಗೂ ಒಂದೇ ಸಮಾನ ಹಕ್ಕುಂಟು. ಆದರೆ ಸ್ತ್ರೀಯರಲ್ಲಿ ಎಲ್ಲರಿಗೂ ಸಮಾನ ಹಕ್ಕು ಸಮಾನ ಬಾಳ್ವೆ ದೊರೆತಿಲ್ಲ, ಇವರಲ್ಲೇ ಹಕ್ಕು ಭೇದವುಂಟು.

ಸಿನಿಮಾ ನಟಿಯರು ಅಥವಾ ಇನ್ಯಾವುದೇ ಕಲಾವಿಧೆಯರಾದ ಸ್ತ್ರೀಯರು ಎಷ್ಟು ಬೇಕಾದರೂ ಮದುವೆಯಾಗಬಹುದು. ಉದಾ:– ಆರತಿ ಜಯಂತಿ ರೇಖಾ ಮುಂತಾದ ಸಿನಿಮಾ ನಟಿಯರು, ಅವರಿಗೆ ಸಮಾಜ ಗೌರವ ಕೊಡುತ್ತದೆ. ಅವರಂತೆಯೆ ಸಾಮಾನ್ಯ ಸ್ತ್ರೀಯಾಗಿ ಜೀವಿಸುವ ಹೆಣ್ಣಿಗೇಕೆ ಸಮಾಜ ಬೆಲೆ ಕೊಡಲ್ಲ! ಸಿನಿಮಾ ನಟಿಯು ಹೊಂದಿರುವ ಎಲ್ಲಾ ಸಾಮರ್ಥ್ಯವನ್ನು ಈ ಹೆಣ್ಣು ಹೊಂದಿದ್ದರೂ ಅವಳಿಗೆ ಕೀಳಾಗಿ ಸಂದಿಸುವುದೇಕೆ? ಸಾಮಾನ್ಯ ಸ್ತ್ರೀಯೂ ಇತರೆ ಕಲಾವಿಧೆ ಸ್ತ್ರೀಯರಂತೆ ಸಮಾಜದ ಕಟ್ಟು ಪಾಡುಗಳನ್ನು ಮೀರಿ ಮೂಢನಂಬಿಕೆಗಳನ್ನು ನಾಶ ಮಾಡುತ್ತ ಹೊಸ ದಿಕ್ಕಿನತ್ತ ಸಾಗಿದರೆ ಸ್ತ್ರೀಯುಗವನ್ನು ಸೃಷ್ಟಿಸಬಹುದು.

ಹಿಂದಿನ ಸಂಪ್ರದಾಯಗಳು ಜಾರಿಯಲ್ಲಿರುವ ಧರ್ಮವೆಂದರೆ ಹಿಂದೂ ಧರ್ಮ. ಈ ಧರ್ಮದವರಲ್ಲಿ ತುಂಬಾ ನೋವುಗಳನ್ನು ಅನುಭವಿಸುವವರು ಬ್ರಾಹ್ಮಣ ವಂಶದವರು. ಇವರಂತೂ ಹೇಳಲಾಗದಷ್ಟು ನೋವುಗಳನ್ನು ಅನುಭವಿಸುತ್ತಾರೆ. ವಿಧವೆಯಾದವಳು ದೇವರನ್ನು ಪೂಜಿಸುವಂತಿಲ್ಲ. ದೇವರ ಕೋಣೆಗಂತೂ ಇಣುಕಿ ನೋಡುವಂತೆಯೂ ಇಲ್ಲ. ಯಾರಾದರೂ ಶುಭ ಕಾರ್ಯಕ್ಕೆ ಹೊರಟರೆ ಅವರಿಗೆ ಎದುರಾಗುವಂತಿಲ್ಲ ಎದುರಾದರೆ ಅಂದು ಏನಾದರೂ ತೊಂದರೆಯಾಗುತ್ತೆ ಎಂದು ಮನದೊಳಗೆ ಅವಳನ್ನು ನಿಂದಿಸುವ ಜನರುಂಟು. ಒಟ್ಟಿನಲ್ಲಿ ಅವಳ ಜೀವನದಲ್ಲಿ ಅಕಸ್ಮಿಕ ದುರ್ಘಟನೆ ನಡೆದು ಗಂಡ ಸತ್ತರೆ ಮುಗಿಯಿತು ಅವಳ ಜೀವನ, ಜೀವನ ವಿಡೀ

22 ನೇ ಪುಟ ನೋಡಿ.

ಜಿಗಣೆ—ನೀನು.

ತನ್ನನ್ನು ನಾನು ಮುಚ್ಚಿಟ್ಟುಕೊಂಡಿದ್ದ
ಮಾಘ ಮಾಸದ ಬಗಲಲ್ಲಿ ಮೆಲ್ಲನೆ ಜಾರಿ
ಒಳಗೊಳಗೇ ಸದ್ದಿಲ್ಲದೆ ಸರಿದು
ಜೀರುಂಡೆಯಂತೆ ಜೀಕು ಹಾಕಿದ್ದೆ ನೀನು.

ಚುಮು ಚುಮು ಸಂಜೆಯಲ್ಲ ಬೆಳಗು
ಮುಸು ಮುಸು ನೆನಪುಗಳ ನಗು.
ಬಿರಿದು ಬಿಚ್ಚಿಕೊಂಡ ಮೃದು ಮಲ್ಲಿಗೆ
ತೋಳುಗಳಗಲಿಸಿ ಅಪ್ಪುಗೆಯ ಆಹ್ವಾನ
ಚಳಿಗೆ ಕಟಿಸುವ ಹಲ್ಲು, ಬಿಳಿಚಿದ ಮಂಜಿನ
ಹೆಪ್ಪುಗಟ್ಟಿದ ನೀರವ ಮೌನ.
ಕುಳಿಗಾಳಿಯ ಸೆಳೆತಕ್ಕೆ ಬಿಗಿದ ತುಟಿ
ಗಳ ಬಿಡಿಸಿ ಮಾತುಗಳ ಮಿಂಚಿಸಿದ್ದೆ.
" ಚಳಿಗೆ ಬೆಂಕಿ ಹೊತ್ತಿಸು, ಕಾವೇರಲಿ
ಕತ್ತಲಿನ ತಣ್ಣ ಕೊಳದಲಿ "
ತಿಳಿವು ಮೂಡದ ಹುಡುಗಿ
ಎಂದರಿವಿರಲಿಲ್ಲ ನನಗೆ
ಬಹುಶಃ......ತಿಳಿದಿತ್ತೇನೋ ನಿನಗೆ.

ಚಳಿಗೆ ಬಿಗಿದು ಸಂಕುಚಿಸಿದ್ದ ಚರ್ಮಕ್ಕೆ
ನಿನ್ನ ಸ್ಪರ್ಶದ ಅರಿವೂ ಆಗಿರಲಿಲ್ಲವೆಂಬುದು.
ಸತ್ಯವೇ, ಅಲ್ಲದೇ...ನೀನು ಜಿಗಣೆಯಂತೆ
ಮಂದಗತಿಯಲ್ಲೇ ಸಾಗಿ, ಚಳಿಯಲ್ಲೇ
ನನ್ನನ್ನಪ್ಪಿ ಹರಿದಾಡಿದ್ದೆ, ಹರಿದ ಚೂರೂ
ಅರಿವು ನನಗೆ ನೀಡದೆಯೇ
ಕ್ಷಣ ಕೂಡಲೇ ಮೈಯಿಂದ ಜಾರಿದ ಕೆಂಪು
ದ್ರವ, ನೋವೆನಿಸಲೂ ಆಗಲಿಲ್ಲ ನನಗೆ.
ಹಿಡಿ–ಹಿಡಿಯಾಗಿ ರಕ್ತ ಹೀರಿಬಿಟ್ಟದ್ದೆ
ಕ್ಷುದ್ರ ಹುಳು! ಜಿಗಣೆ ನೀನು.

ಮರುಘಳಿಗೆ ತಣ್ಣಗೆ, ನಿನ್ನ ಹಿಡಿತವ
ಸಡಿಲಿಸಿ ಜಾರಿ ಹೋದೆ, ಸಾಗಿ ನಡೆದೆ.
ನನಗೀಗ ಬಳಲಿಕೆ, ಬಾಯಾರಿಕೆ.
ಒಮ್ಮಿಂದೊಮ್ಮೆಲೆ ನನ್ನಲ್ಲಿದ್ದುದ್ದನ್ನೆಲ್ಲಾ
ಬಸಿದುಕೊಂಡ ಹಾಗೆ ಹಸಿಯುತ್ತಿದ್ದೆ,
ಕುಸಿಯುತ್ತಿದ್ದೆ, ನಿಡುಸುಯ್ಯುತ್ತಿದ್ದೆ.
ಕಳೆದು ಕೊಂಡಾಗಿತ್ತು, ಕಳವು ಮಾಡಿದ್ದೆ
ಸುಳಿವು ನೀಡದೆಯೇ
ನನಗೆ ತಿಳಿದಿರಲಿಲ್ಲ ನೀನೊಂದು
ಜಿಗಟು ಜಿಗಣೆಯೆಂದು.

ಕೆ. ಎನ್. ಲಾವಣ್ಯ ಪ್ರಭ.

20 ನೇ ಪುಟದಿಂದ.

ಕೊರಗಿ ಕೊರಗಿ ಸಾಯಬೇಕಾಗುತ್ತದೆ. ಹೆಣ್ಣು ಗಂಡನ ಮನೆಗೆ ಬರುವಾಗ ಸಾವಿರಾರು ಆಸೆಗಳನ್ನು ಹೊತ್ತು ಬಂದಿರುತ್ತಾಳೆ. ಆದರೆ ಅವುಗಳೆಲ್ಲ ನನಸಾಗದೆ ಉಳಿಯುತ್ತವೆ.

ಉತ್ತಮ ಸಂಪ್ರದಾಯ:-

ಹೇಳಬೇಕೆಂದರೆ ಹೆಣ್ಣು ಸ್ವಾತಂತ್ರ್ಯವಾಗಿ ಬಾಳಲು ಹಾಗೂ ಅವಳು ಕೊನೆಯುವರೆಗೂ ಪತಿಯ ಜೊತೆ ಸಂಸಾರ ಮಾಡಲು ತನ್ನ ಆಕಾಂಕ್ಷೆಗಳನ್ನು ಪೂರ್ತಿಗೊಳಿಸಲು ಹಾಗೂ ಗಂಡ ಸತ್ತರೆ ಪುನರ್ವಿವಾಹವಾಗಲು ಉತ್ತಮ ಸಂಪ್ರದಾಯದ ಧರ್ಮವೆಂದರೆ ಮುಸ್ಲಿಂ ಧರ್ಮ. ಮುಸ್ಲಿಂ ಧರ್ಮದಲ್ಲಿ ಗಂಡ ಸತ್ತರೂ ಸರಿ. ಹೆಂಡತಿ ಸತ್ತರೂ ಸರಿ. ಇಬ್ಬರೂ ಪುನರ್ವಿವಾಹ ಮಾಡಿಕೊಳ್ಳಬಹುದು. ಅವರಿಗೆ ಮುಸ್ಲಿಂ ಸಮಾಜವೇ ಆಗಲಿ ಹಾಗೂ ಇನ್ನಿತರ ಯಾವುದೇ ತೊಂದರೆಗಳಿರುವುದಿಲ್ಲ.

ಇನ್ನುಳಿದ ಧರ್ಮಗಳು ಹೀಗೇಕೆ ಮಾಡಬಾರದು? ಎಲ್ಲಾ ಧರ್ಮಗಳಲ್ಲಿಯೂ ಇದು ಈಗ ಬೆರೆಯುತ್ತಿದೆ. ಆದರೆ ಸಮಾಜದ ಮುಚ್ಚು ಮರೆಯಿಂದ ಮಾತ್ರ ಸಮಾಜದ ಎದುರಿಗೆ ಯಾರೂ ಧೈರ್ಯವಾಗಿ ಮುನ್ನುಗ್ಗುತ್ತಿಲ್ಲ. ಸಮಾಜಕ್ಕೆ ಸ್ತ್ರೀ ಹೆದರಬೇಕು, ಆದರೆ ಎಲ್ಲಾ ವಿಷಯಗಳಿಗೂ ಹೆದರಬಾರದು. ಸಮಾಜ ಹುಟ್ಟಿರುವುದೇ ನಮ್ಮಿಂದ. ಸಂಪ್ರದಾಯ, ಮೂಢನಂಬಿಕೆ, ಇವುಗಳೆಲ್ಲ ಬರೀ ಕಾಲ್ಪನಿಕವಷ್ಟೆ. ಹೆಣ್ಣು ಧೈರ್ಯ ಮಾಡಿದರೆ ವಿಧವೆಯಾಗಿ ಕೊರಗುವುದನ್ನು ಬಿಟ್ಟು ಹೊಸ ಜೀವನ ಆರಂಭಿಸಲು ಮುನ್ನುಗ್ಗಬಹುದು. ಹೆಣ್ಣು ಕ್ಷಣ ಕಾಲ ಯೋಚಿಸಿದರೆ ಸಾಕು. ನಾವು ಗಂಡಿನಂತೆಯೇ ಸ್ವತಂತ್ರ್ಯ ಜೀವಿಗಳು. ಅವನಿಗಿರುವ ಹಕ್ಕುಗಳು ನಮಗೂ ಇದೆ. ಅವನಂತೆಯೂ ಹಾಗೂ ಕಲಿಸಿವಿದೆಯಂತೆ ನಾವು ಪುನರ್ವಿವಾಹವಾಗಬಹುದೆಂದು ತೀರ್ಮಾನಿಸಿದರೆ ಖಂಡಿತವಾಗಿ ಯೌವನದಲ್ಲಿ ವಿಧವೆಯರಾಗಿ ಬರಡು ಜೀವನ ಸಾಗಿಸುವ ಪಾಪಿಳೆಯರು ಸಂತೋಷವಾಗಿ ಸಂಸಾರಿಕರಾಗಿ ಗಂಡಿನಂತೆಯೇ ಜೀವನ ಸಾಗಿಸಬಹುದೆಂದು ನನ್ನ ಅಭಿಪ್ರಾಯ. ನೀವೇ ಯೋಚಿಸಿ ನೋಡಿ?

ಅನ್ವರ್ ಸಾಬ್.

ಓದುಗರಲ್ಲಿ ಮನವಿ

ಗಗನಕ್ಕೇರುತ್ತಿರುವ ಮುದ್ರಣ ಕಾಗದದ ಬೆಲೆ, ಅಂಚೆ ವೆಚ್ಚ ಮುಂತಾದವುಗಳಿಂದಾಗಿ ಪತ್ರಿಕೆಯನ್ನು ಪ್ರಕಟಿಸುವುದು ಕಷ್ಟಕರವಾಗಿದೆ. ಮಾನಸಕ್ಕೆ ಆಸಕ್ತಿ ಹಾಗೂ ಪ್ರೋತ್ಸಾಹ ವ್ಯಕ್ತಪಡಿಸಿ ಪತ್ರ ಬರೆಯುವ ಸಹೃದಯರು ಹಾಗೂ ಚಂದಾ ಮುಗಿದಿರುವ ಓದುಗರು ತಕ್ಷಣ ಚಂದಾಹಣ ಕಳಿಸಿದರೆ ಪತ್ರಿಕೆಯನ್ನು ಉಳಿಸಿ ಬೆಳೆಸಲು ನೀರೆರೆದು ಪ್ರೋತ್ಸಾಹಿಸಿದಂತಾಗುತ್ತದೆ. ಓದುಗರೆಲ್ಲರನ್ನು ಉಳಿಸಿಕೊಳ್ಳಬೇಕೆಂದು ನಮ್ಮ ಅಪೇಕ್ಷೆಯಾದರೂ ಉಚಿತವಾಗಿ ಒಂದು ಸಂಚಿಕೆಯನ್ನು ಕಳಿಸಲು ಉಂಟಾಗುವ ಖರ್ಚನ್ನು ಭರಿಸುವುದು ಪತ್ರಿಕೆಗೆ ಹೊರೆಯಾಗುತ್ತದೆ. ಪ್ರಿಯ ಓದುಗರು ಸಹಕರಿಸಿ ತಕ್ಷಣ 20-00 ರೂ ಚಂದಾ ಹಣ ಕಳಿಸಿಕೊಡಬೇಕೆಂದು ಕೋರುತ್ತೇವೆ.

ಸಂ. ಮಂ.

ಅಕ್ಕ ಪಕ್ಕ

"ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯ ತಂದುಕೊಟ್ಟು, ಉತ್ತಮ ಸ್ಥಾನ-ಮಾನ ಕಲ್ಪಿಸಿದ ಬಸವಣ್ಣ ನಿಜವಾದ ಕ್ರಾಂತಿ ಪುರುಷ"

ಆರ್ ರಾಮಾಜೋಯಿಸ್.
ಹೈಕೋರ್ಟ್‌ನ ನ್ಯಾಯಾಧೀಶ.

"ನನ್ನ ಹೆಸರನ್ನು ದೂರದರ್ಶಿಯೊಬ್ಬಳೊಡನೆ ಎಳೆದು ಪತ್ರಿಕೆಗಳು ರಂಪ ಮಾಡದೆ ಇದ್ದಿದ್ದರೆ, ನನ್ನ ಮಗಳು ಸ್ಥಿತ ಪ್ರಜ್ಞತೆಯಿಂದ ಆಡಲು ಸಾಧ್ಯವಾಗುತ್ತಿತ್ತು. ಮತ್ತು ಆಕೆ ಈವರೆಗೂ ಅಗ್ರಸ್ಥಾನದಲ್ಲೇ ಇರುತ್ತಿದ್ದಳು.

ಪೀಟರ್ ಗ್ರಾಫ್.
ಸ್ಟೆಫಿಗ್ರಾಫ್ ತಂದೆ.

"ಸ್ಟೆಫಿಯ ಆಟ ಸ್ಟೆಫಿಯದು, ನನ್ನ ಆಟ ನನ್ನದು. ಅವಳಿಗೂ ನನಗೂ ಹೋಲಿಸುವುದೇಕೆ. ನಾನು ಎಂದಿಗೂ ಎರಡನೇ ಸ್ಟೆಫಿಯಲ್ಲ. ನಾನು ಬ್ಯಾಂಕೆಹಬರ್ ಅಷ್ಟೆ.

ಬ್ಯಾಂಕೆಹಬರ್.
ಜರ್ಮನಿಯ ಟೆನಿಸ್ ಆಟಗಾರ್ತಿ.

"ಸೆಲೆಸ್ ರೇಡಿಯೋ ಸಂದರ್ಶನದ ಮೂಲಕವಾಗಲಿ ಇಲ್ಲವೇ ಪತ್ರಿಕಾ ಗೋಷ್ಠಿಯನ್ನು ಕರೆದಾಗಲಿ ತಮ್ಮ ಅಸ್ವಸ್ಥತೆ ಬಗ್ಗೆ ತಿಳಿಸಬೇಕಿತ್ತು.

ಪಾಮ್ ಶ್ರೈವರ್.
ಟೆನಿಸ್ ಆಟಗಾರ್ತಿ.

'ಶಸ್ತ್ರ ಕ್ರಿಯೆಗೆ ಒಳಗಾಗಿರುವ ಹೆಂಗಸರ ಪೈಕಿ ಬಹಳ ಮಂದಿ ಶ್ರಮ ಜೀವಿಗಳು ಇವರಿಗೆ ಪೌಷ್ಠಿಕ ಆಹಾರ ಸೇವನೆಗಾಗಿ ಸರ್ಕಾರ ಕೊಡುವ ಹಣದ ಮೊತ್ತ ಹೆಚ್ಚಿಸುವುದು ಆಗಬೇಕಾಗಿದೆ ಮತ್ತು ಈ ಹಣ ನೇರವಾಗಿ ಸಂಬಂಧಪಟ್ಟ ಮಹಿಳೆಗೆ ಸಿಗುವಂತಾಗಬೇಕು.'

ಡಿ. ಕೆ. ತಾರಾದೇವಿ.
ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವೆ.

ಸಮಸ್ಯೆ ಬೃಹದಾಕಾರವಾದದ್ದು. ನಿರ್ದೇಶಕರು ನನಗೆ ಅಳುವಂತೆ ಹೇಳಿದಾಗ, ಎಷ್ಟು ಗ್ಲಿಸರಿನ್ ಬಳಸಿದರೂ ನನಗೆ ಅಳು ಬರಲಿಲ್ಲ. ಬದಲಿಗೆ ನಗೆ ಬರಲು ಆರಂಭವಾಯಿತು. ಹೇಗೆ ತಾರೆಯರು ಚಿತ್ರಗಳಲ್ಲಿ ಸತತವಾಗಿ ಕಣ್ಣೀರು ಸುರಿಸುತ್ತಾರೆ ಎಂದು ನನಗೆ ಆಶ್ಚರ್ಯವಾಯಿತು.

ಅಶ್ವಿನಿ ನಾಚಪ್ಪ.

'ಗ್ಲ್ಯಾಮರ್' ಶಬ್ದಕ್ಕೂ ವಿಶಾಲ ವ್ಯಾಪ್ತಿಯ ಅರ್ಥ ಬರಬೇಕು. ಗ್ಲ್ಯಾಮರ್ ಮೈ ಪ್ರದರ್ಶನಕ್ಕಷ್ಟೇ ಒಪ್ಪಿಕೊಳ್ಳುವ ಇಮೇಜಲ್ಲ. ನಾನು ದೇಹ ಪ್ರದರ್ಶನದಿಂದ ಬಲು ದೂರ. ಆ ರೀತಿಯ ಯಾವುದೇ ಪಾತ್ರಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ.

ವಿನಯಾ ಪ್ರಸಾದ್.

ಚಿತ್ರದ ದೃಶ್ಯೀಕರಣದಲ್ಲಿ ನರ್ತಿಸುವುದು ಹೆಚ್ಚು-ಕಡಿಮೆ ಮದುವೆಯ ಕಾರ್ಯಕ್ರಮವೊಂದರಲ್ಲಿ ನರ್ತಿಸಿದಂತೆ ಅಷ್ಟೆ. ಆದರೆ ಸೇರುವ ಜನದ ಗುಂಪಿನಲ್ಲಿ ವ್ಯತ್ಯಾಸವಿರುತ್ತದೆ ಅಷ್ಟೆ.

ಅನಿತಾ ಅಯೂಬ್.
ದೇವಾನಂದ್ ತನ್ನ ಚಿತ್ರಕ್ಕಾಗಿ ಹುಡುಕಿರುವ ಹೊಸ ನಾಯಕಿ.

ಈಗಲೂ ನಾನು ಹದಿಹರೆಯದ ಹುಡುಗಿಯ ಪಾತ್ರ ಮಾಡಬಲ್ಲೆ. ಪೋನಿಟೈಲ್ ಜಡೆ ಹಾಕಿ ಫ್ರಾಕ್ ಧರಿಸಿದ ಪಾತ್ರಗಳಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಆದರೆ ಈಗಲೂ ನನ್ನಿಂದ ಯಾರಾದರೂ ಅಂಥ ಪಾತ್ರಗಳನ್ನು ನಿರೀಕ್ಷಿಸಿದರೆ ನನ್ನ ವ್ಯಕ್ತಿತ್ವಕ್ಕೆ ಅದು ಹೊಂದುವುದಿಲ್ಲ.

ಶ್ರೀದೇವಿ.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು — ೫೬೦೦೬೭.

ನಂ ಮ್ಯಾಗ್ (5)ಪಿಆರ್‌ಬಿ ರಿಜಿಸ್ಟರ್ಡ್: 28ನೇ — 8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : "ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು—560067